
ಕೊರವಂಜಿ

Koravanji



ಸೆಪ್ಟೆಂಬರ್
೧೯೫೫

★

ಸಂಪಾದಕರು :
ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಯಂ. ಬಿ. ಮರಕಿಣಿ
ಶ್ರೀ॥ ನಾ. ಕಾ.
ಶ್ರೀಮತಿ॥ ರುದ್ರಮ್ಮ
ಶ್ರೀ॥ ರಾಮಿ
ಶ್ರೀ॥ ಅ. ರಾ. ಸೇ.
ಶ್ರೀ॥ ಕಾಮತ್
ಶ್ರೀ॥ "ಕೇಫ"
ಶ್ರೀ॥ ಹಾ.ರಾ.
ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ ೩ ಆಣೆ

ತಿಳಿನಗೆಯ ಮಾಸಪತ್ರಿಕ


ಕಾದು ನಿಂತು ಬೇಸತ್ತಾಗ...
ನಿಮ್ಮ ದೇಹ ಮನಸ್ಸು ಎರಡೂ ನೆಮ್ಮದಿಯಿಂದಿರುವುದಿಲ್ಲ ಅಲ್ಲವೇ?
ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಚೈತನ್ಯವನ್ನೂ ಕೊಡುವ
ಸಾಧನವೆಂದರೆ ಸ್ನಾನ! ಸ್ನಾನಕ್ಕೆ ಮೈಸೂರು ಸ್ಯಾಂಡಲ್ ಸೋಪು
ಮರೆಯಬೇಡಿ ಮತ್ತೆ
ಮೈಸೂರು ಸ್ಯಾಂಡಲ್ ಸೋಪು
ದೇಹದ ಕಲ್ಮಶವನ್ನು
ನಿವಾರಿಸುವುದಲ್ಲದೆ
ಮೃದು ಮಧುರವಾದ
ಸುವಾಸನೆಯನ್ನು
ಕೊಡುತ್ತದೆ
Mysore Sandal
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು
MEMBER
ISTMA



...ಖಂಡಿತವಾಗಿಯೂ ನಂಬಲರ್ಹವಾದ...
...ನೋಡಲು ಅಂದವಾಗಿರಬೇಕಾದಲ್ಲಿ...
...ಒಳಭಾಗದಲ್ಲಿಯೂ ಮತ್ತು ಹೊರಭಾಗದಲ್ಲಿಯೂ ಉಪಯೋಗಿಸಬೇಕಾದಲ್ಲಿ...
...ಬಣ್ಣಗಳು ಮಿರುಗುತ್ತಿರಬೇಕಾದಲ್ಲಿ...
...ಸಂದೇಹವೇ ಇಲ್ಲ, ಇವುಗಳಿಗೆಲ್ಲಾ ಒಂದೇ ಉತ್ತರ ...ಅತ್ಯುತ್ತಮವಾದ
ಶಾಲಿಮಾರ್ ಸೂಪರ್‌ಲ್ಯಾಕ್
ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು, ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು, ಪ್ರಕಾಶಮಾನವಾದ 38 ಶ್ರೇಷ್ಠ ಬಣ್ಣಗಳಲ್ಲಿ ದೊರಕುವುವು.

ಆಗಸ್ಟ್ 26 ರಿಂದ

ಬೆಂಗಳೂರು :

ಗೀತಾ — ಶಾರದ

ಮತ್ತು ಮೈಸೂರು: **ಪ್ರಭುದೇವ (ಪದ್ಮಾ)**

ಚಿತ್ರಮಂದಿರಗಳಲ್ಲಿ.

ಸೆಪ್ಟೆಂಬರ್ 2 ರಿಂದ ರೂಪಮಹಲ್ (ಸಿವಿಲ್ ಏರಿಯಾ)

ವಿನೋದಾರವರ ಕಾಲಾನುರೂಪ ಕಲಾಕಾಣಿಕೆ—

ಕನ್ಯಾಶುಲ್ಕಮು (ತೆಲುಗು)



ಆಂಧ್ರ ಜನಪ್ರಿಯ ನಾಟಕ
ಜಿ. ಅಪ್ಪಾರಾವುರವರ
'ಕನ್ಯಾಶುಲ್ಕಮು' ಕತೆಯ ಆಧಾರ

ಭೂಮಿಕೆ :

ಎನ್ ಟಿ. ರಾಮರಾವು
ಸಾವಿತ್ರಿ — ಜಾನಕಿ
ಸಿ. ಎಸ್. ಆರ್.
ಛಾಯಾದೇವಿ
ಕುಟುಂಬರಾವು
ಡಾ॥ ಸುಬ್ಬರಾವು

ನಿರ್ದೇಶನ: ಪಿ. ಪುಲ್ಲಯ್ಯ

ಶೀಘ್ರದಲ್ಲಿಯೇ :

ಚಿತ್ರದುರ್ಗ: ಯೂನಿಯನ್ ಕೋಲಾರ: ವೆಂಕಟೇಶ್ವರ

A CHAMRIA RELEASE



ಸಂಪುಟ ೧೫ ಸೆಪ್ಟೆಂಬರ್ ೧೯೫೫ ಸಂಚಿಕೆ ೬

ಕುಹಕಿಡಿಗಳು

ನಮ್ಮಲ್ಲಿ ಸೌಹಾರ್ದವಿದೆ ಎಂದು ಖಡಾಖಂಡಿತವಾಗಿ ಹೇಳುವ ಜೋರಿನಲ್ಲೇ ಎರಡೂ ಪಂಗಡಗಳಿಗೂ ವಿರಸ ಶುರುವಾಯ್ತು ಎನ್ನುವುದು ಕೇವಲ ಕುಹಕ! ಅಷ್ಟೇ!!

* * *

ಒಬ್ಬ ಕಾರ್ಮಿಕ ಇನ್ನೊಬ್ಬನನ್ನು ಕೇಳಿದನಂತೆ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರದರ್ಶನವನ್ನು ನೋಡಿದೆಯಾ ಎಂದು.

—ಆತ ಉಟ್ಟ ಹರಕಲು ಪಂಚೆಯನ್ನು ನೇವರಿಸುತ್ತಾ ಹೇಳಿದನಂತೆ ನನಗೂ ಪಂಚೆ-ವಾರ್ಷಿಕ ಯೋಜನೆಯೇನೇ!–ಬೋನಸ್ಸು ಬಂದಾಗ–ಎಂದು.

* * *

ಹಿಂದಿಯ ವಾಕ್ಸಂಪತ್ತನ್ನು ಅಭಿವೃದ್ಧಿಸಬೇಕು. (ಬಾಬು ರಾಜೇಂದ್ರಪ್ರಸಾದ್)

....ಅದಕ್ಕೇನು! ಶ್ರೀ ಇ ವಿ.ಆರ್. ನಾಯಕರನ್ನು ಕೇಳಿದರೆ ಹಲವಾರು ಗರಮಾಗರಂ ವಾಕ್ಕುಗಳನ್ನು ಒದಗಿಸಿಕೊಡುತ್ತಾರೆ

* * *

ಈ ಸಾರಿ ಮೊಹರಂ ಹಬ್ಬದಲ್ಲಿ ಬಂಗಾಳಾ ಹುಲಿಯ ವೇಷ ಹಾಕಿದ್ದಾನೆಂದು ಮೈಸೂರು ಹುಲಿಗಳು ಅವಿಶ್ವಾಸ ಸೂಚಿಸಿದರಂತೆ.

....ಹುಲಿಗಳಿಗೂ ಬಂತೇ? ಉತ್ತರ ದಕ್ಷಿಣ ವಿರಸ!!

* * *

"ಗುಡ್ಡಗಾಡಿನ ಮಗು ನಾನು" (ನೆಹ್ರೂ)

—ಅಂದಮೇಲೆ ಗುಡ್ಡಗಾಡಿನವರು ಈಗ ತಮ್ಮ ಪ್ರತಿನಿಧಿಯನ್ನು ಬೇರೆ ಆಯ್ಕೆ ಮಾಡಬೇಕಾಗಿಲ್ಲ!

* * *

ಹಗಲು ಕಂಡ ತಾರೆಯನ್ನು ಇರುಳಿನಲ್ಲಿ ಗುರ್ತಿಸದೇ ಹೋದರಂತೆ

* * *

ಮೈಸೂರಿನ ಹೊಸ ಎರಡೂ ಮುಕ್ಕಾಲು ಕೋಟಿ ರೂಪಾಯಿ ಸಾಲದಲ್ಲಿ ಹಳೇ ಸಾಲದ ಜಾತಾ ನಗದು ಬಂದದ್ದು ಒಂದೂವರೆ ಕೋಟಿ ರೂಪಾಯಿ ಮಾತ್ರವಂತೆ.

—ನಾವು ಪಠಾಣನ ಹತ್ತಿರ ಸಾಲ ತೆಗೆದುಕೊಂಡ ಹಾಗೆಯೇ ಇದೆಯಲ್ಲವೇ!

* * *

ಶ್ರೀಮತಿ ಸೀತಾದೇವಿಯವರು ಭಾರಿ ಜವಹಿರಿಗಳನ್ನು ತೆಗೆದುಕೊಂಡು ಭಾರತದಿಂದ ಹೊರಟು ಹೋಗಿದ್ದಾರಂತೆ.

—ಹಿಂದೊಮ್ಮೆ ಶ್ರೀಮತಿ ಸೀತಾದೇವಿಯವರಿಗೆ ಶ್ರೀಮಾನ್ ಹನುಮಂತರು ಮುದ್ರೆಯುಂಗುರವನ್ನು ತೆಗೆದುಕೊಂಡು ಹೋಗಿ ಕೊಟ್ಟಿರಲಿಲ್ಲವೇ?

ಅದಕ್ಕೆ ಈಗ ಪ್ರತ್ಯುತ್ತರ.

* * *

ಭಾರತರತ್ನ ಸರ್ ಎಂ. ವಿ. ಯವರು ದಿವಾನರಾದ ಕಾಲದಲ್ಲೇ ಮಹಾತ್ಮಾಜಿ ಯವರು ಮೈಸೂರನ್ನು ರಾಮರಾಜ್ಯ ಎಂದು ಕರೆದಿದ್ದರಂತೆ.

—ಈಗ ಮೈಸೂರನ್ನು ಭಾರತ ರತ್ನರು ಯಾವರಾಜ್ಯ ಎಂದು ಕರೆದಿದ್ದಾರೋ ಇನ್ನೂ ಖಚಿತವಾಗಿ ಗೊತ್ತಿಲ್ಲ.

ಅಗಸನ ರಾಜ್ಯ ಎಂದಿರಲಿಕ್ಕಿಲ್ಲ! ಅಲ್ಲವೇ?

* * *

ಆಫ್ರಿಕಾದ ಘೋರಮೃಗಗಳು ಭಾರತದ ಮೃಗಗಳಷ್ಟು ಅಪಾಯಕರವಲ್ಲವಂತೆ.

... ಇದು ರಾಜಕೀಯಕ್ಕೆ ಅನ್ವಯಿಸುವುದಿಲ್ಲ....

* * *

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅರ್ಧದಷ್ಟು ಅಂದಾಜು ಮೊಬಲಗು ತೃತೀಯ ಪಂಚವಾರ್ಷಿಕ ಯೋಜನೆಯ ಕರಡಿಗಾಗಿ ಮೀಸಲೆನ್ನುವುದು ಶುದ್ಧ ಸುಳ್ಳು....

* * *

ಉರಿಗಾಳು

ಮಕ್ಕಳಿಲ್ಲದವರಿಗೆ 'ಶಿಶುದಾನ' ಎಂಬ ಚಳುವಳಿಯೊಂದನ್ನು ಪ್ರಾರಂಭಿಸಿದರೆ, ತಮ್ಮ ಬಡತನ ತಾನಾಗಿಯೇ ಕಡಮೆಯಾಗುವುದು, ಎಂದು ಉಪಾಧ್ಯಾಯ ಸಂಘವೊಂದು ಠರಾವು ಮಾಡಿದೆ.

*　　　*　　　*

ಎವರೆಸ್ಟ್ ಶಿಖರವನ್ನು ಹಿಲಾರಿ ತೇನ್‌ಸಿಂಗ್ ಎಂಬಿಬ್ಬರಲ್ಲಿ ಯಾರು ಮೊದಲು ಮೆಟ್ಟಿದರು, ಎಂಬ ಪ್ರಶ್ನೆಯನ್ನು ತೇನ್‌ಸಿಂಗ್ ಮೊನ್ನೆ ಇತ್ಯರ್ಥ ಮಾಡಿದ ...ತನ್ನ ಆತ್ಮಚರಿತ್ರೆಯಲ್ಲಿ....'ಹಿಲಾರಿ'ಯೇ ಮೊದಲು ಹತ್ತಿದನಂತೆ... ! ಇದರಿಂದ, ತೇನ್‌ಸಿಂಗನೇ ಇನ್ನೂ ಕೊಂಚ ಎತ್ತರಕ್ಕೆ ಏರಿದಂತಾಗಿದೆ.

*　　　*　　　*

ಗೋವಾ ಎಂಬ ಊರಿನ ಹೆಸರನ್ನು ಹೇಳುವಾಗ, "ಪೋರ್ಚುಗೀಸರೆ! ಹೋಗಿ-ಬನ್ನಿ" ಎಂಬ ಅರ್ಥ ಬರುತ್ತದಲ್ಲಾ, ಎಂದು ತಮಿಳರು ಅನುಮಾನಿಸುತ್ತಿರುವರಂತೆ.

*　　　*　　　*

ಬರ್ಮಾ ಪ್ರಧಾನ ಮಂತ್ರಿ ಊನೂ ಅವರು ರಷ್ಯಾಗೆ ಭೇಟಿ ಕೊಡುತ್ತಾರಂತೆ....ಊನೂ ಅವರು ಎನ್ನುವುದಕ್ಕಿಂತ, ಅವರೂನೂ ಎಂದು ಹೇಳುವುದೇ ಉಚಿತ.

*　　　*　　　*

ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ವಾಷಿಂಗ್‌ಟನ್ನಿಗೆ ಹೋಗುತ್ತಾರಂತೆ....ಆಪತ್‌ಬಾಂಧವಾ, ಎಂದರೆ, ಅಮೇರಿಕನ್ನರು ಕೈಬಿಡುವುದಿಲ್ಲ.

*　　　*　　　*

"ನಮ್ಮ ಹುಡುಗ ತಪ್ಪಿಸಿಕೊಂಡಿದಾನೆ; ಕಾಕಿಚಡ್ಡಿ; ಮೆಳ್ಳಗಣ್ಣು; ಮುಳ್ಳು ಮುಖ; ಬಲಗಡೆ ಕ್ರಾಪ್ ಬಾಚಿದಾನೆ" ಎಂದು ಮೊನ್ನೆ ಪತ್ರಿಕೆಯಲ್ಲಿ ಪ್ರಕಟಿಸಿದ ತಂದೆ, ಈಗ, ಹುಡುಗ ಪತ್ತೆಯಾಗಿದಾನೆ ಎಂದು, ಅಮೇರಿಕಾಗೆ ಸ್ಕಾಲರ್ಷಿಪ್ ಮೇಲೆ ಪ್ರವಾಸ ಹೋಗಿದಾನೆ ಎಂದು ತಿಳಿದು ಬಂದಿದೆ, ಎಂದೂ ಬರೆದಿದಾರಂತೆ.

*　　　*　　　*

ಮುಂದಿನ ಮಹಾಚುನಾವಣೆ ಎಂದು ಡಿಲ್ಲಿ ಸರ್ಕಾರದ ಇಲೆಕ್ಷನ್ ಕಮೀಷನರ್‌ರವರು ಇನ್ನೂ ತೀರ್ಮಾನಿಸದೆ ಇರುವುದರಿಂದ ಅನೇಕ ಪ್ರಮುಖ ನಾಯಕರು ತಮ್ಮ ಜಾತಕಗಳನ್ನು ಪೆಟ್ಟಿಗೆಯೊಳಗಿಂದ ಹೊರ ತೆಗೆದೇ ಇಲ್ಲವಂತೆ.

* * *

ಭಾರತದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸಿನಿಮಾ ಮಂದಿರಗಳನ್ನು ಕಟ್ಟಲು ಅಮೇರಿಕನ್ನರು ಸಹಾಯಮಾಡುತ್ತಾರಂತೆ. ಇದಕ್ಕಾಗಿ,ನಮ್ಮ ವಿದ್ಯಾರ್ಥಿಗಳು ಎಂದೆಂದಿಗೂ ಅವರಿಗೆ ಋಣಿಗಳಾಗಿರುತ್ತಾರೆ.

* * *

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ದೇಶದಾದ್ಯಂತ ವೈದ್ಯರ ಸಂಖ್ಯೆಯನ್ನು ಹೆಚ್ಚಿಸಲು ತೀರ್ಮಾನಿಸಿರುವುದರಿಂದ, ರೋಗಾದಿಗಳನ್ನೂ ಹೆಚ್ಚಿಸಬೇಕೆಂದು ವೈದ್ಯಸಭೆಯೊಂದು ಠರಾವು ಮಾಡಿದೆಯಂತೆ.

* * *

ಕನ್ನಡದಲ್ಲೇ ಪಾಠ ಪ್ರವಚನಗಳನ್ನು ನಡೆಸಬೇಕೆಂದು ವಿಶ್ವವಿದ್ಯಾಲಯದವರು ಯೋಚಿಸುತ್ತಿರುವುದರಿಂದ, ಕನ್ನಡ ಪಠ್ಯಪುಸ್ತಕಗಳನ್ನು ಇಂಗ್ಲೀಷಿನಲ್ಲಿ ಟೀಕಿಸಿ ಅರ್ಥ ವಿವರಣೆ ಮಾಡುತ್ತಿರುವ ಕನ್ನಡ ಅಧ್ಯಾಪಕರುಗಳಿಗೆ ತಲೆನೋವು ಬಂದಿದೆ.

* * *

ಭೂಗೋಳವನ್ನು ಚಂದ್ರನಂತೆ ಪ್ರದಕ್ಷಣೆ ಮಾಡುವ ನೂರಾರು ಹೊಸ ಚಂದ್ರ ಬಿಂಬಗಳನ್ನು ಅಮೇರಿಕಾ ರಷ್ಯ ರಾಷ್ಟ್ರಗಳು ನಿರ್ಮಿಸಿ ಅಂತರಿಕ್ಷಕ್ಕೆ ಕಳುಹಿಸುತ್ತಾರಂತೆ....ಅಮೇರಿಕನ್ ಚಂದ್ರಗೋಳವನ್ನು ಗುರುತಿಸಲು ಅವುಗಳ ಮೇಲೆ 'ಜಾಹಿರಾತು'ಗಳನ್ನು ಅಂಟಿಸುವ ಯೋಚನೆ ಇದೆಯಂತೆ. ರಷ್ಯನ್ ಗೋಳಗಳಿಗೆ ಅವುಗಳ ಕೆಂಪು ಬಣ್ಣವೇ ಸಾಕಾಗಿದೆ.

* * *

ದಸರಾವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಈ ಸಲ ಭಾರತದ ನಾನಾ ಪ್ರಾಂತಗಳಿಂದ ಪ್ರೇಕ್ಷಕರೂ ಪ್ರೇಕ್ಷಕಿಯರೂ ಬರುವ ನಿರೀಕ್ಷಣೆ ಇದೆಯೆಂದು ಪ್ರಚಾರ ಮಾಡಲಾಗಿದೆ.

* * *

ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡುವುದರಿಂದ, ಮೈಸೂರಿನ ಪ್ರತಿಯೊಬ್ಬನೂ, ಒಡವೆಗಳನ್ನು ನೋಡಿ, "ನನ್ನ ಚಿನ್ನಾ! ನನ್ನ ಚಿನ್ನಾ!" ಎಂಬ ಉದ್ಗಾರವನ್ನು ತೆಗೆಯಬಹುದಂತೆ.

* * *

ಮಂತ್ರಿಗಳಮೇಲೆ ಪ್ರಭಾವ ಬೀರಿ ಅವರ ಕೆಲಸಗಳಿಗೆ ಸಹಾಯಮಾಡುವ ಕೆಲವು ವ್ಯಕ್ತಿಗಳನ್ನು ಉಪಮಂತ್ರಿ ಎನಬೇಕೆ? ಸಹಮಂತ್ರಿ ಎನಬೇಕೆ? ಎಂಬ ಪ್ರಶ್ನೆ ಎದ್ದಿದೆ....ತಂತ್ರಿ, ಎಂದರೆ ಸಾಲದೆ?

* * *

ಕೊರವಾವಲೋಕನ

ಜೋಡಿ ಕಾನೂನಬಿಲ್ಲು ಬಿದ್ದಿತ್ತು ನೋಡಿ, ಆ ದಿನ ಜೋಡಿದಾರ್ ರಾಮಶಾಸ್ತ್ರಿ ಕ್ಲಬ್ಬಿಗೆ ಬಂದಿದ್ದ. ತಿಂಗಳಿಗೊಮ್ಮೆ ಅವ ತನ್ನ ಗ್ರಾಮದಿಂದ ಬೆಂಗಳೂರಿಗೆ ಬರುವ ವಾಡಿಕೆ, ವ್ಯಾಪಾರದ ಸಲುವಾಗಿ. ಮೂರು ರಾತ್ರಿ ಕ್ಲಬ್ಬಿಗೆ ಬಂದು ತನ್ನ ಪೂರ್ವ ಆಶ್ರಮದ ಛಟವನ್ನೆಲ್ಲಾ ತೀರಿಸಿಕೊಂಡು ಹಿಂತಿರುಗಿ ತನ್ನ ಗ್ರಾಮಕ್ಕೆ ಹೋಗಿ ತಿಂಗಳೆಲ್ಲಾ ವೈದಿಕ ಶಿಖಾಮಣಿಯ ಜೀವನ ನಡೆಸುತ್ತಿದ್ದ. ಹುಟ್ಟುವಾಗಲೇ ತಂದೆ ತಾಯಿಂದಿರನ್ನು ಋಣಿಯಾಗಿ ಆರಿಸಿಕೊಂಡಿದ್ದರಿಂದ ಸುಖಜೀವನ ನಡೆಸುತ್ತಿದ್ದ.

ಕ್ಲಬ್ಬಿಗೆ ಅವನು ಬಂದರೆ ಒಲುಕಳೆ. ವೇದಮೂರ್ತಿಗಳು ಕುರ್ಚಿ ಅಲಂಕರಿಸಿದರೆ ಚೆನ್ನಲ್ಲವೇ? ತೇಜೋಬಲವುಳ್ಳವರ ಅಮೃತ ಹಸ್ತದಿಂದ ಗ್ಲಾಸೆಲ್ಲಾ ಪಾವನವಾಗುವುದಿಲ್ಲವೇ? ವೇದೋಚ್ಚಾರಣೆ ಮಾಡುವಾಗ ತೀರ್ಥದ ನೆರವು ಸೊಗಸಲ್ಲವೇ? ಹಾಗೂ ಹಣವಂತರು ತಾಪತ್ರಯ ಹೇಳಿಕೊಂಡಾಗ ಕೇಳಲು ಬಲು ಆಪ್ಯಾಯಮಾನವಲ್ಲವೇ? ಅಂತಹ ಸಂದರ್ಭಗಳಲ್ಲೇ ಅಲ್ಲವೇ, ನಮ್ಮ ಕೇಂದ್ರ ಸರ್ಕಾರದವರು ಛಡಿ ಶಿಕ್ಷೆ ರದ್ದುಮಾಡಿದ್ದು ತಪ್ಪು ಎನ್ನಿಸುವುದು?

ಗಂಟಲು ನೆನೆಯುತ್ತಲೂ ಶಾಸ್ತ್ರಿಗಳು ಶುರುಹಚ್ಚಿದರು. "ಅಯ್ಯೊ! ಹಳ್ಳಿ ಸಂಸಾರ ಎಷ್ಟು ಕಷ್ಟ ಅಂತೀರಿ! ಗೌರಿಹಬ್ಬ ಬಂತು ಮನೆಗೆ ಸುಣ್ಣ ತೊಡಿಸಿ ಕೆಮ್ಮಣ್ಣು ರಂಗೋಲಿ ಇಡಿಸಬೇಕು ಎಂದು ನಮ್ಮಾಕೆ ಹಠಹಿಡಿದಿದ್ದಾಳೆ. ಕಡೆಗೆ ೧೦ ರೂಪಾಯಾದರೂ ಚಟ್ಟು ಅಡಿಗೆಯಾಕೆ ಮೂರು ಪಾತ್ರೆಗಳಿಗೆ ಕಲಾಯಿ ಮಾಡಿಸದೇ ಇದ್ದರೆ ರಾಜೀನಾಮೆ ಕೊಡುತ್ತೇನೆ, ಸಣ್ಣ ಪಾತ್ರೇಲಿ ಎರಡೆರಡುಸಲ ಬೇಯಿಸಲು ಆಗುಲ್ಲ ಎಂದು ಹೆದರಿಸುತ್ತಿದ್ದಾಳೆ ಅದಕ್ಕೆ ಎರಡು ರೂಪಾಯಿ ದಂಡ. ದನಗಳಿಗೆ ಹಿಂಡಿ ಬೇಕು ಅಂತ ಗೋಸಾಲ ವಾರಕ್ಕೊಮ್ಮೆ ನನ್ನನ್ನು ಹಿಂಡುತ್ತಾನೆ ಅದರ ಬದಲು ಆ ಹಸುಗಳನ್ನೇ 'ಇನ್ನೂ' ಹಿಂಡಿದರೆ ಇನ್ನಷ್ಟು ಹಾಲಾದರೂ ದೊರೆಯುತ್ತಲ್ಲವೇ?.... ಈ ಮಧ್ಯೆ ನಮ್ಮ ಕುಮಾರ ಕಂಠೀರವ ಕಾಲೇಜು ಸೇರಬೇಕು ಅಂತ ಹಠ ಹಿಡಿದಿದಾನೆ. ಇಸಿಪಿಎಸ್ ಆಗಿದೆ, ಸುಖವಾಗಿ ಮನೇಲಿ ನೆಮ್ಮದಿಯಾಗಿರಬಾರದೆ? ಜೋಡಿಗ್ರಾಮದ ಕೆಲಸವನ್ನು ನೋಡಿಕೋಬಾರದೆ? ನನಗೆ ನೆರವಾಗಬಾರದೆ? ಆಗ ನಾನು ಬೆಂಗಳೂರಲ್ಲಿ ಇನ್ನೆರಡುದಿನ ಹೆಚ್ಚಾಗಿರಬಹುದಲ್ಲವೇ? ಇತ್ಯಾದಿ ಇತ್ಯಾದಿ.

ಆ ಸರದಿಯ ಬಿಲ್ಲನ್ನು ಶಾಸ್ತ್ರಿ ರುಜುಮಾಡಬಹುದೆಂಬ ಮಹದಾಶೆಯಿಂದ ಕೇಳುತ್ತ ನಾವೆಲ್ಲಾ ಕೂತಿದ್ದೆವು.

ಶಾಸ್ತ್ರಿ ಕನ್ನಡಕ ತೆಗೆದು ಒರೆಸಿಕೊಂಡ.

"ಯಾಕೋ ಶಾಸ್ತ್ರಿ! ನಿನ್ನ ದುಃಖ ನೋಡಿ ಕನ್ನಡಕವೂ ಅಳುತ್ತೇನೋ" ಎಂದೆ.

"ಕನ್ನಡಕ ಅಳೋದು ಶಾಸ್ತ್ರಿ ದುಃಖಕ್ಕಲ್ಲವೋ? ಅದರ ಯಜಮಾನನ ಹತ್ತಿರ ಹೋಗಬೇಕು ಎಂದು ಅಳುತ್ತಿದೆ ಕಣೋ" ಎಂದ ಕುಪ್ಪಣ್ಣ.

ಹೋದ ತಿಂಗಳು ಕ್ಲಬ್ಬಿಗೆ ಬಂದಾಗ ಶಾಸ್ತ್ರಿ, ನರ್ಸಿಮ್ಮು ಕನ್ನಡಕವನ್ನು ಎರವಲು ತೆಗೆದುಕೊಂಡವ, ಹಾಗೇ ಗ್ರಾಮಕ್ಕೆ ಹೊರಟುಹೋಗಿದ್ದ.

ಆಗ ಗೋವಿಂದು ಪಲುಕಿದ "ಹಾಗಲ್ಲ ಕಣ್ರೋ ಕನ್ನಡಕ ಹಾಕ್ಕೊಂಡರೆ ಎಲ್ಲರಿಗೂ ದೃಷ್ಟಿ ತಿಳಿಯಾಗುತ್ತೆ, ಶಾಸ್ತ್ರಿಗೆ ದೃಷ್ಟಿ ಮಂದವಾಗುತ್ತೆ, ಇಂತಹ ಅಪ್ರಯೋಜಕನ ಮೂಗಿನಮೇಲೆ ನನ್ನ ಸೆರೆಹಾಕಿದ್ದಾರಲ್ಲಾ ಅಂತ ಅಳುತ್ತೆ ಕಣ್ರೋ! ಎಂದ. ಗೋವಿಂದು ಮೈಲಿಗೆಯಲ್ಲಿ ಏನನ್ನೂ ತಿನ್ನುಲ್ಲ, ಏನನ್ನೂ ಕುಡಿಯುಲ್ಲ. ಅಂದಮೇಲೆ ಯಾರ ಹಂಗೂ ಇಲ್ಲ

ಆ ವೇಳೆಗೆ ಹತ್ತಿರಿದ್ದ ಕ್ಲಬ್ಬಿನ "ಹುಡುಗರೆಲ್ಲಾ" ನಿಮಿರಿ ನಿಂತರು. ಏನು ಕಾರಣ, ಮಹಾರಾಜರು ಬಂದರೋ ಎಂದು ನೋಡುವಾಗ್ಗೆ ಕೊರವ ತಾನು ಕೂತಿದ್ದ ಕುರ್ಚಿಯಿಂದ ಎದ್ದಿದ್ದ. ಪಕ್ಕದ ಮೇಜಿನಬಳಿ ಏನನ್ನೋ ಓದುತ್ತಿದ್ದವ, ಎದ್ದು ನಿಂತು, ಸಾವಧಾನವಾಗಿ, ಪುರೋಹಿತರು ಮದುವೆಗೆ ಬರುವಂತೆ ನಮ್ಮ ಮೇಜಿನ ಹತ್ತಿರ ಬಂದು ನಿಂತು ಶಾಸ್ತ್ರಿಯ ಬೆನ್ನು ತಟ್ಟುತ್ತಾ ಹೇಳಿದ.

"ಶಾಸ್ತ್ರಿ! ನಿನ್ನ ತಾಪತ್ರಯಕ್ಕೆಲ್ಲಾ ಒಂದೇ ಪರಿಹಾರ. ಇದು ನೋಡು ಕೇಂದ್ರದ ಎರಡನೇ ಪಂಚವಾರ್ಷಿಕ ಯೋಜನೆ! ಇದನ್ನು ಚೆನ್ನಾಗಿ ಓದು, ನಿಮ್ಮಂತಹವರ ಕಷ್ಟ ನೀಗಿಸುಕ್ಕೇ ಈ ಯೋಜನೆ ಹೂಡಿರುವುದು. ನಿನ್ನ ಖರ್ಚುಗಳನ್ನೆಲ್ಲಾ ದ್ವಿತೀಯ ಪಂಚವಾರ್ಷಿಕಯೋಜನೆಯಲ್ಲಿ ಸೇರಿಸಬೇಕೆಂದು, ಸಂಸ್ಥಾನದ ಮುಖಾಂತರ ಶ್ರೀ ನಂದಾ ಅವರಿಗೆ ಕಳಿಸು, ಎಲ್ಲವೂ ವ್ಯವಸ್ಥೆಯಾಗುತ್ತೆ.

ಆಗಲಿಲ್ಲ ಅನ್ನು! ಆಗ ಸ್ಥಳೀಯ ಸರ್ಕಾರವೇ ನಿನ್ನ ಜೋಡಿಯನ್ನು ರಾಷ್ಟ್ರೀಕರಣಮಾಡಿ, ನಿನ್ನ ಕಷ್ಟಗಳನ್ನೆಲ್ಲಾ ಅವರೇ ಹೊತ್ತುಕೋತಾರೆ. ನೀನು ಧಿಮ್ಮರಂಗನ ಹಾಗಿರಬಹುದು"

ಎಂದು ವಿಶದವಾಗಿ ಹೇಳಿದ.

ಜೋಡಿಗ್ರಾಮ – ರಾಷ್ಟ್ರೀಕರಣ – ಈ ಎರಡು ಶಬ್ದ ಕೇಳಿದ ಶಾಸ್ತ್ರಿ – ತಿರುಗಿ ಮಾತೇ ಆಡಲಿಲ್ಲ ಆ ಸಂಜೆ.

—ತೃತೀಯ ಯೋಜನೆಯನ್ನು ಗುಣಿಸುತ್ತಿದ್ದನೋ ಏನೋ?

ಗೃಹಕೃತ್ಯದ ನೋಟೀಸ್

ತಂದೆ ಪರ್ವತ ರಾಜ, ಹೆಸರು ಪಾರ್ವತಿದೇವಿ, ಕೋಂ ಜಡೆಶಂಕರಪ್ಪ ಹಿಮಾಚಲ ತಾಲ್ಲೋಕ, ಹಿಮಾಲಯ ಹೋಬಳಿ ಗೌರೀಶಂಕರ ಶಿಖರ—(ಹಾಲೀ ಮೈಸೂರ) ಈಕಿಗೆ:—

ನೀನು ನನ್ನ ಲಗ್ನದ ಹೆಂಡಿತಿಯಾಗಿದ್ದು, ಮದುವೆಯಾಗಿ ೪-೬ ಮನ್ವಂತರ ಸುರಳೀತ ಬಾಳ್ವೆ ನಡೆಸಿಕೊಂಡು ಇದ್ದಿ. ಈ ಮಧ್ಯೆ ಯಾವ ಕಾರಣವೂ ಇಲ್ಲದೆ ನಾನು ಭಿಕ್ಷಾಟನೆಗೆ ಸಂಚಾರ ಹೋಗಿದ್ದ ವ್ಯಾಳೆ ನೋಡಿಕ್ಕೊಂಡು ನಾನು ಮನೆಯಲ್ಲಿ ಇಲ್ಲದಿರುವಾಗ ನನ್ನ ನಂದಿ ಮತ್ತೆ ಕೆಲವೊಂದು ಬೆಲೆಬಾಳುವ ಸಾಮಾನುಗಳನ್ನು ಸಹಿತ ತೆಗೆದುಕೊಂಡು ತವರುಮನೆಗೆ ಹೇಳದೇ ಕೇಳದೆ ಓಡಿಹೋಗಿರುತ್ತಿ. ಈ ಮಧ್ಯೆ ನಾರದಮಾವನ ಮೂಲಕ ನಾನು ಎಷ್ಟೋಬಾರಿ ಹೇಳಿಕಳಿಸಿದ್ದಾಗ್ಯೂ ನೀನು ಅವರಿವರ ಮಾತು ಕೇಳಿಕ್ಕೊಂಡು ಹೊರಟು ಬರಲಿಲ್ಲಾ. ಕಾರಣ ಈ ನೋಟೀಸು ತಲ್ಪಿದ ೧ ವಾರದೊಳಗಾಗಿ ನನ್ನ ಸಾಮಾನು ಸಹಿತ ತೆಗೆದುಕ್ಕೊಂಡು ಬಂದರೆ ನಿನ್ನನ್ನು ಕರೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಇದೇ ಸೋಡಾಚೀಟಿ ಅಂತಾ ತಿಳಿದುಕೊಳ್ಳುವುದು.

ಮೊಕ್ಕಾಂ: (ಹೊಬ್ಬಳ್ಳಿ)
ದಿನಾಂಕ: ೧೫ನೇ ಆಗಸ್ಟ್ ೧೯೫೫.

ಈ ||| O ಜಡೇಶಂಕರಪ್ಪಾ
ಮುಕ್ಕಣ್ಣೇಶ್ವರ ಈತನದು ಆಗಿರುತ್ತೆ.

ಉತ್ತರ


ನಿನ್ನನ್ನು ಮದುವೆಯಾಗಿ ಅಜಮಾಸು ೪-೬ ಮನ್ವಂತರಗಳಾದರೂ ನನ್ನ ಅತ್ತೆಮಾವ ಯಾರೂ ಅಂತ ತಿಳೀಲಿಲ್ಲ. ಆದ್ದರಿಂದ ನೆರೆಹೊರೆಯವರೆಲ್ಲಾ ಆಡಿಕೊಳ್ಳಲಿಕ್ಕೆ ಹತ್ತಿದರು. ಇದನ್ನು ನಾನು ನಿನಗೆ ಎಷ್ಟೋಸರ್ತಿ ಹೇಳಿದಾಗ್ಯೂ ನೀನು ಕಿವಿಮೇಲೆ ಹಾಕಿಕೊಳ್ಳಲಿಲ್ಲ. ನೀನು ಮದಿವೆಯಾದ ಲಾಗಾಯ್ತು ಜಗಳವಾಡುವುದನ್ನೇ ಅಭ್ಯಾಸಕ್ಕೆ ಶುರು ಹಚ್ಚಿರುತ್ತೀ. ಅಪ್ಪನ ಮನೆಯಿಂದ ಆವೊತ್ತು ಹೋಮಕ್ಕೆ ಹೇಳಿಕೆ ಬರಲಿಲ್ಲಾಂತ ರೇಗಾಡಿ ಜಗಳಾ ಹೂಡಿ ಅಪ್ಪನ ತಲೇಟೊಂಗೆಯೊಂದನ್ನೇ ಕಿತ್ತಿದ್ದಿ. ಕಳೆದಸಾರಿ ನಾನು ತೌರುಮನೆಯಿಂದ ಬಂದಾಗ ತಿಂಡಿ ವಗೈರೆ ತರಲಿಲ್ಲಾಂತ ನನ್ನಮೇಲೆ ಅಮಾನುಷವಾಗಿ ವರ್ತಿಸಿ ಎಮ್ಮೆ ಕೋಣಾ ಹೊಡಿಯೋಹಾಗೆ ಹೊಡಿದೂ ಬಡಿದೂ ಮಾಡಿ ಹೊರಗೆಹಾಕಿದಿ. ಆದ್ದರಿಂದ ನಾನು

ತೌರುಮನೆಗೆ ಬಂದಿದ್ದಾಗಿದೆ. ಈಗ ನನ್ನ ಜೀವ ಹಿಡಿದಿರೋದಕ್ಕೆ ಇಲ್ಲಿ ಆಗಿರುವ ಖರ್ಚು, ಸಾಲ ವಗೈರೆ ಕೊಡತಕ್ಕದ್ದಿದೆ. ಅಲ್ಲದೆ ನಾನು ಮೊದಲು ಬರುವಾಗ ತಂದ ಬೆಲೆಬಾಳುವ ದಾಶೀನೆಗಳನ್ನು ಮತ್ತು ನಮ್ಮ ತಂದೆ ನನ್ನ ಲಗ್ನದ ಕಾಲಕ್ಕೆ ಕೊಟ್ಟ ವರದಕ್ಷಿಣೆ ಸಹ ಪರತುಕೊಟ್ಟು ನೀನು ಬೇರೆ ಗಂಗಿ ಎಡಿಕಿ ಮಾಡಿಕೊಳ್ಳಲು ನನ್ನ ಕಡಿಯಿಂದಾ ಯಾವ ಅಡ್ಡಿಯೂ ಇರೂದಿಲ್ಲಾ. ನೀನು ನನ್ನ ಎಲ್ಲಾ ಸಾಮಾನುಗಳನ್ನು ಕೊಟ್ಟು ಹುಲಿಚರ್ಮ, ತ್ರಿಶೂಲ, ನರಕಪಾಲ ಮುಂತಾದ ನಿನ್ನ ಮೊಡವೆಗಳನ್ನು ಕೊಂಡುಹೋಗಬಹುದು. ಇದಕ್ಕೆ ನೀನು ಜರೂರು ಉತ್ತರ ಕೊಡದಿದ್ದರೆ–ನಾನು ಇಲ್ಲಿನ ಗೆಲುವಾಂಬಾ ಹೆರಿಗೇ ಆಸ್ಪತ್ರೆ ನರ್ಸ್ ಟ್ರೈನಿಂಗ್ ಸೇರುತ್ತೇನೆ–ನನ್ನ ಹೊಟ್ಟೆಪಾಡಿನ ಸಲುವಾಗಿ. ಇದೇ ಸೋಡಾಚೀಟಿ ಅಂತಾ ತಿಳಿದುಕೊಳ್ಳತಕ್ಕದ್ದು

ಎಂತ—

ಪಾರ್ವತೀದೇವಿ ಕೊಟ್ಟ ಸಹಿ॥ಡಿಶ್॥

— ಲಾಯರ್ ಮರಗಿಣಿ, ಲ್ಲಿಲ್ಲೆಲ್ಲಬ್ಬಿ....



ಗೋವಾ ಸತ್ಯಾಗ್ರಹದಿಂದ ಯಾವತ್ತು ಹಿಂದಿರುಗಿ ಬಂದಿರಿ! ಸಾರ್ ಚೆನ್ನಾಗೇ ಇದೀರಲ್ಲ!!

ಹುಡುಗರ ಪೋಲಿ ಮಾತು

ಮೊನ್ನೆ ನನ್ನ ಸೋದರಳಿಯನ ಮನೆಗೆ ಹೋಗಿದ್ದೆ, ನನ್ನ ಹುಡುಗನನ್ನ ಹುಡುಕಿಕೊಂಡು. ಗೋವಾ ನಗರವನ್ನು ಪೋರ್ಚುಗೀಸರು ಬಿಟ್ಟು ಹೊರಡಲಿಲ್ಲ ವಲ್ಲಾ ಎಂಬ ಕೋಪಕ್ಕೆ ನನ್ನ ಹೈದ, ಆರುವರ್ಷದ ಹೀಚು, ತನ್ನ ಮನೆ ಬಿಟ್ಟು ಹೊರಟೇಬಿಟ್ಟಿದ್ದ! ಒಂದು ವಾರದಿಂದ ನಾಪತ್ತೆ! ಅಂದರೆ, ಅವತ್ತು ಕಟ್ಟಿಗೆ ಹಿಡಿದು ಕೊಂಡು ಬೀದಿ ಬೀದಿ ಮೆರವಣಿಗೆ ಹೊರಟರಲ್ಲಾ, ಸಣ್ಣಸಣ್ಣ ಮರಿಗಳ ಗುಂಪು, ಅವರ ಜೊತೆ ನೀನೂ ಸೇರಿ ಆ ಸಲಾಜಾರ್ ಮಹಾಶಯನನ್ನು ಹೆದರಿಸಬೇಡ ಅಂತ ನಾನು ಹೇಳಿದ್ದಕ್ಕೆ, ನನ್ನ ಮರಿ ಸುಭಾಷ್‌ಬೋಸ್ ಹಾಸಿಗೆಯಿಂದೆದ್ದು ಹಿತ್ತಲ ಬಾಗಿಲಿಂದ ತೂರೇಬಿಟ್ಟ....ಹನುಮಂತ! ಗೋವಾಕ್ಕೋ ಏನೋ? ಯಾರು ಬಲ್ಲರು....

ಪೋಲೀಸರಿಗೆ ದೂರು ಕೊಡೋಣ ಅಂದರೆ, — ಅವರು ಹೇಳಿದರು, ನಮ್ಮವ ರಾರೂ ನಿಮ್ಮ ಹುಡುಗನನ್ನ ಕದ್ದಿಲ್ಲ, ಅಂತ. ಪೇಪರಲ್ಲಿ ಅವನ ಫೋಟೋ ಹಾಕಿ ಸೋಣ ಅಂದರೆ, ನಮ್ಮ ಹತ್ತಿರ ಇದ್ದದ್ದು ಅವನದು ಒಂದೇ ಫೋಟೋ! ಜುಟ್ಟು ಬಿಡಿಸುವ ಮುನ್ನ ಹೆಣ್ಣುವೇಷಹಾಕಿ ಜಡೆ ಹೆಣೆದು ಹೂ ಮುಡಿಸಿದ್ದು! ಇನ್ನು ಅವನ ಬಣ್ಣ, ಇಂಡೆಲಿಬಲ್ ಇಂಕು! ತೊಟ್ಟಿದ್ದ ಬನೀನು ಹರಕು! ನಿಕ್ಕರ್ ತೂತು. ಅದನ್ನೆಲ್ಲ ಪ್ರಕಟಿಸಿ ನಾನೇಕೆ ನನ್ನ ಮುಖಕ್ಕೇನೇ ಮಂಗಳಾರತಿ ಎತ್ತಿಸಿಕೊಳ್ಳಬೇಕು?

ಆದ್ದರಿಂದ, ನಾನೇ ಹೊರಟೆ ಮನೆಯಿಂದ, ಒಳ್ಳೆ ನೆಪ ಸಿಕ್ಕಿತಲ್ಲಾ, ಅವಳಿಂದ ತಪ್ಪಿಸಿಕೊಳ್ಳುವುದಕ್ಕೆ, ಎಂಬ ಖುಷಿಯಲ್ಲಿ. ಕತ್ತೆ ಇನ್ನೆಲ್ಲಿಗೆ ಹೋಗುತ್ತೆ? ಪಾಳು ಗೋಡೆ ಮಗ್ಗುಲಿಗೇನೇ, ಎಂದು ನಿಶ್ಚಯಿಸಿ ಅವನ ಮೇಷ್ಟರ ಮನೆಯಲ್ಲಿ ಕೇಳಿದೆ. ಬಸ್‌ಸ್ಟಾಂಡಿಗೂ ಹೋದೆ. ಅಲ್ಲೊಬ್ಬ ತಿರುಕನ ಹತ್ತಿರ ಹನುಮಂತ ತುಂಬಾ ಸರಸ ವಾಗಿದ್ದು, ಅವನ ಡಬ್ಬದಿಂದ ಕಾಸುಕದ್ದು ಕಡಲೆಕಾಯಿ ಕೊಂಡು ತಿನ್ನುವುದುಂಟೆಂದು ನನಗೆ ಗೊತ್ತು. ಆ ತಿರುಕ ಹೇಳಿದ, ಯಾವುದೋ ಬಸ್ ಹತ್ತಿ ಹಾರನ್ ಒತ್ತುತ್ತಾ ಇದ್ದಹಾಗಿತ್ತು, ಶನಿವಾರ ಬೆಳಗ್ಗೆ, ಅಂತ.

ಸರಿ! ನನ್ನ ಸೋದರಳಿಯನ ಮನೇಗೇ ಬಿಟ್ಟಿರುತ್ತಾನೆ ಗಾಡಿ, ಆ ಬಸ್ಸಿಗೆ ಅವನ ಅಮ್ಮನ ಸಾಸುವೆ ಡಬ್ಬದಿಂದ ಮಾಯವಾಗಿದ್ದ ಎಂಟಾಣೆ ಸಾಕು, ಎನ್ನುತ್ತ, ಅತ್ತ ಧಾವಿಸಿದೆ.

ಕೂತಿದ್ದ ಬಾಗಿಲಲ್ಲೇ, ಕುಮಾರ ಕಂಠೀವರ. "ಗೋವಾಹ" "ಮಾರಾ" "ಲಂಕಾಸುಂದರಂ ಕೀ ಜೈ", "ನಿಜಲಿಂಗಂ ಕೀ ಜೈ", ಎಂದು ಕೂಗುತ್ತ! ಅವನಿಗಾಗಿ ಹೆಂಡತಿ ಹೊತ್ತ ಹರಕೆಗಳನ್ನೆಲ್ಲ ಸಲ್ಲಿಸಲು ನೂರು ರೂಪಾಯಾದರೂ ಬೇಕಲ್ಲಾ, ಎಂದು ಶಪಿಸುತ್ತಾ, ಹನುಮಂತನ ಕೆನ್ನೆಗೆ ಒಂದು ಬಲವಾಗಿ ಬಾರಿಸಿದೆ........ಆಗ, ಕೊಂಚ ಸಮಾಧಾನವಾಯಿತು.

ಊಟಮಾಡಿ ಮಲಗಿದ್ದೆ. ಸೋದರಳಿಯನ ಸಂತತಿ ಮೂರು, ನನ್ನವನೊಬ್ಬ ನಾಲ್ಕನೆಯದು, ಒಟ್ಟು ಸೇರಿ ಹೊರಗಡೆ ಗಲಾಟೆಮಾಡುತ್ತಿದ್ದುವು.

"ಜಯಲಕ್ಷ್ಮಿಗೆ ಜಖಂ ಆಗಿದೆ", ಎಂದ, ಸೋದರಳಿಯನ ಎರಡನೆಯ ಮಹಾಪರಾಧ.

"ಒಂದು ಕಣ್ಣು ಬೇರೆ ಸೊಟ್ಟಾಗಿ ಹೋಗಿದೆ" ಎಂದ ಇನ್ನೊಬ್ಬ.

"ಈಗ, ಜಯಲಕ್ಷ್ಮಿ ಪದ್ಮಾವತಿ ಸಮಸಮ" ಎಂದ ಮೂರನೆಯವ.

"ಅದು, ಮೊನ್ನೆ, ಜಯಲಕ್ಷ್ಮಿಗೂ ಸೋಮಶೇಖರಗೂ ಡಿಕ್ಕಿ ಆಯಿತಂತೆ, ಮಾರಮ್ಮನ ಗುಡಿ ಮುಂದಿನ ತೋಪು ಹತ್ತಿರ"

"ಸೋಮಶೇಖರ ಅಲ್ಲವೋ ಸುಲೇಮಾನ್‌ಗೆ ಕಣೊ"

"ಸುಲೇಮಾನ್ ಆ ರಸ್ತೆಗೆಲ್ಲಿ....ಅದಲ್ಲ! ಷರೀಫ್ ಇರಬೇಕು"

"ಷರೀಫಗೂ ಜಯಲಕ್ಷ್ಮಿಗೂ ಮಿಲಾಖತ್ತೇ ಇಲ್ಲ" ಎಂದ ದೊಡ್ಡವನು.

ನನ್ನ ಹನುಮಂತ, "ಮಿಲಾಖತ್ ಎಂದರೇನೋ" ಎಂದು ಕೇಳಿದ.

"ನಿನಗೆ ಗೊತ್ತಿಲ್ಲ, ಸುಮ್ಮನಿರು! ನಿಮ್ಮೂರಿಗೆ ಷರೀಫೂ ಇಲ್ಲ, ಜಯಲಕ್ಷ್ಮಿಯೂ ಇಲ್ಲ"

"ಜಯಲಕ್ಷ್ಮಿ ಹಿಂದುಗಡೆ ಪೂರಾ ಜಖಂ ಆಗಿದೆ! ನಾನು ನೋಡಿದೆ", ಎಂದ ಎರಡನೆಯ ಪೋಲಿ.

ನನಗೆ ರೇಗಿತು. ಎದ್ದು ಕೂತು, ದೊಣ್ಣೆ ಹುಡುಕಿದೆ. ಎಂಥ ಕೆಟ್ಟ ಸಹವಾಸ ದಲ್ಲಿ ಬೆಳೆಯುತ್ತಿವೆ ಈ ಹೈಕಳು. ನಮ್ಮ ಪಟ್ಟಣವೇ ವಾಸಿ ಆಯಿತಲ್ಲ, ಈ ಹೋಬಳಿ ಹೆಡ್‌ಕ್ವಾರ್ಟರ್ಸ್‌ಗಿಂತ, ಎಂದು ರೇಗಿದೆ. ಸಾಯಂಕಾಲವೇ ಹೊರಟುಬಿಡಬೇಕು. ಹನುಮಂತ ಇಂತಹ ದುಷ್ಟರ ನಡುವೆ, ಲಂಗುಲಗಾಮಿಲ್ಲದೆ ಪೋಕರಿ ಮಾತಾಡುವ ಹುಡುಗರ ಜೊತೆ ಅರೆಗಳಿಗೆ ಕೂಡ ಇನ್ನು ಇರಬಾರದು, ಅಂತ ನಿಶ್ಚಯಿಸಿ ಬ್ಯಾಗೊಳಕ್ಕೆ ಬಟ್ಟೆಗಳನ್ನೆಲ್ಲ ತುರುಕಿದೆ.

ಸೋದರಳಿಯನನ್ನ, "ಶಾಮಣ್ಣಾ" ಅಂತ ಕೂಗಿದೆ! ಬಂದ,....ಭೂಪತಿ! "ಲೋ! ಮರೆತೇಬಿಟ್ಟಿದ್ದೆ! ಇವತ್ತು ಆರುಗಂಟೆಗೇನೇ ಊರಲ್ಲಿ ಒಂದು ಅರ್ಜೆಂಟ್

ಕೆಲಸ ಇತ್ತು .. ಹನೂನೂ ಕರೆದುಕೊಂಡು ಹೊರಟುಬಿಡಬೇಕು" ಎಂದೆ ರ್‍ಯಾಸ್ಕಲ್ ಮರುಮಾತಾಡದೆ, ಹೂಂ, ಅದಕ್ಕೇನು?, ಅಂದ.

"ಬಸ್ಸು ಯಾವುದಿದೆ? ಎಷ್ಟುಹೊತ್ತಿಗೆ ಹೊರಡುತ್ತದೆ?" ಎಂದು ಕೇಳಿದೆ. "ಜಯಲಕ್ಷ್ಮಿ ಬರಬೇಕಿತ್ತು, ಮೂರು ಗಂಟೆಗೆ! ಆದರೆ, ಅದಕ್ಕೂ ಸುಲೇಮಾನ್‌ಗೂ ಮೊನ್ನೆ ಡಿಕ್ಕಿಯಾಗಿ, ಪೂರಾ ಜಖಂ ಆಗಿದೆ, ಎರಡಕ್ಕೂ....ಇನ್ನು ಷರೀಫ್ ಈ ದಾರಿಯಲ್ಲಿ ಬರುವ ಹಾಗಿಲ್ಲ...." ಎಂದ, ಉತ್ತರವಾಗಿ.

"ಹಾಗಾದರೆ?", ಎಂದೆ.


"ಇನ್ನು ನಿನಗೆ ಆ ಪದ್ಮಾವತಿಯೇ ಗತಿ ... ಅದಕ್ಕೂ ಏನೇನೋ ಹಾಳುರೋಗ ಕಣ್ಣು ಬೇರೆ ಸೊಟ್ಟು....ಆದರೆ, ಅದೇನು ಅಷ್ಟು ಅಪಾಯವಿಲ್ಲ... ಕತ್ತಲೆಹೊತ್ತಿಗೆ ಊರು ಸೇರುತ್ತೀಯಲ್ಲಾ, ಇನ್ನೇನು?", ಅಂದ.

ಹುಡುಗರ ಪೋಲಿಮಾತಿಗೆ ಹೆದರಿ, ಬ್ಯಾಗನ್ನು ಕೈಯಲ್ಲಿ ಹಿಡಿದ ನಾನು....

"ಬೇಡ, ಕಣೊ! ನಾಳೆಯೋ ಆಚೆನಾಳೆಯೋ ಹೊರಡುತ್ತೇನೆ, ಸಾಕು! ಅಷ್ಟರೊಳಗೆ, ಜಯಲಕ್ಷ್ಮಿಯೇ ಸರಿಯಾಗಬಹುದು", ಎಂದು,

ಮತ್ತೆ, ಮಲಗಿದೆ.

— ನಾ. ಕ.



ಕುರ್ಚಿಗಳಿಗೂ ಕೂಡ ಸೋಷಿಯಲಿಸ್ಟ್ ಪ್ಯಾಟರ್ನ್ ತಂದಿಟ್ಟಿದಾರೆ ನೋಡಿ!
ಆಸಾಮಿ ನೋಡಿ ಕುರ್ಚಿ ಮಾಡೋದಿಲ್ಲ!!

ವರ ಕೊಡದ ಪರಮೇಶ್ವರ

ಬಿ. ಎ. ಮುಗಿಯಿತು; ಪದವಿ ದೊರಕಿತು, ವರ್ಷವಾಗಲಿ ಎರಡು ಕಳೆಯಿತು;
ಆದರಿನ್ನೂ ಮದುವೆ ಇಲ್ಲ, ಯಾರಕಿವಿಯಲಿ ಗೋಳ ಕರೆಯಲಿ?
ಆದರಿನ್ನೂ ದೊರಕಲಿಲ್ಲ, ...ಆರ್ಯಪುತ್ರನು; ಪ್ರಾಣನಾಥನು,
ತಾಳಿಕಟ್ಟಿ ಕೂಳನಿಕ್ಕಿ, ಬಾಳಯಾತ್ರೆಗೆ ತೋಳ ಕೊಡುವಾ
ಆರ್ಯಪುತ್ರನು! ಊರಬಾಯನು ಮುಚ್ಚಿ ರಕ್ಷಿಸಿ ಪಕ್ಷಿಗೆಂದು ಗೂಡು ಕೊಡುವಾ
ಪ್ರಾಣನಾಥನು ಸಿಗಲಿ ಇಲ್ಲ! ಯಾರ ಕಿವಿಯಲಿ ಗೋಳ ಕರೆಯಲಿ? (ಪಾಪ)
ಏಳುವರ್ಷದಿಂದಲವರು, ಹೆತ್ತತಾಯಿ ತಂದೆ ನಂಟರು
ಬೀಳುತೇಳುತ ಹುಡುಕುತಿರುವರು....
ಗಂಡನೆನಿಸಲು ನನಗೆ ಒಂದು ಗಂಡು ಪ್ರಾಣಿಯು ತರಲಿಕಾಗಿ,—
ನಗುವು ಬರುತಿದೆ, ನೆನೆದುಕೊಂಡರೆ; ಅಳುವುದೊಂದೇ ಉಳಿದಿದೆ.
ಚಿತ್ರದುರ್ಗದ ಹತ್ರದಿಂದ ಏ – ಚಿತ್ರಮೃಗವನು ಕರೆದು ತಂದರು,
ತುಂಗಭದ್ರೆಯ ಆಚೆಯಿಂದಲು ಮಂಗವೊಂದನು ಎಳೆದು ತಂದರು.
ಎಮ್ಮೆಯೆಂದೇ ಹೆಮ್ಮೆ ಪಡುವಾ ಕಮ್ಮಿರೂಪನ ಜೀವಿಗಳನು
ಅವರೆಲ್ಲೊ ಹೋಗಿ ಹುಡುಕಿ ತಂದರು, ..
ನಾನು ಒಲ್ಲೆ ಎನುವ ಮೊದಲೇ ಅವರು ಒಲ್ಲೆ ಎಂದರು.
ಕೋಡುಗಲ್ಲಿನ ಕಾಡುಪಾಪ, ಕಾಡುಗಲ್ಲಿನ ಕಾಗೆ ಒಂದು,
ಉದ್ದಕತ್ತಿನ ಒಂಟೆ ಒಂದು, ಗರುಡ ಮೂಗಿನ ಗೃಧ್ರವೊಂದು.
ಆನೆ ಕಿವಿಗಳು, ಶಾನೆ ಧಡಿಯರು, ಉಬ್ಬುಹಲ್ಲಿನ ತುರಿವ ಮಣೆಗಳು
ಮುಳ್ಳು ಮುಖಗಳು, ಕುಳ್ಳವಾಮನ ಒಡ್ರಗಣ್ಣಿನ ರಕ್ಕಸ....
ನಾನು ಒಲ್ಲೆ ಎನುವ ಮೊದಲೇ ಅವರು ಒಲ್ಲೆ ಎಂದರು....
ನನ್ನ ಐಡಿಯಲಷ್ಟು ಎತ್ತರ, ಎಂಬಿರೇನು? ಇಲ್ಲ, ಇಲ್ಲ,
ಆದರೂನೂ, ಇನ್ನುವರೆಗೆ, ನನ್ನ ಕನಸಿನ, ನಾನು ಬಯಸುವ
ಒಬ್ಬ ವರನೂ ಸುಳಿಯಲಿಲ್ಲ! ಆ
ಚೆನ್ನಕೇಶವನೆಂದು ತನ್ನ ವರದ ಹಸ್ತವ ನೀವನೋ!
ಮಂತ್ರಿ ಮಕ್ಕಳೆ, ಐ. ಎ. ಎಸ್‌ಗಳೆ, ಏ. ಎಸ್. ಪಿಗಳೆ,
ಬೇಕು ಎಂಬ ಹಟವೆ ಇಲ್ಲ....ಯೂ, ಎಸ್ಸೇಗೆ ಹೋಗಿಬಂದ....ಬಡ....
ಪಿ. ಎಚ್. ಡಿ. ಯೆ ಸಾಕು, ಎನಗೆ! ರಾಜಕಪೂರನ ರೂಪೇ ಸಾಕು!–ಅವ
ದುಡಿದು ತಿನ್ನಲೇಬೇಕೆಂಬ ಸಂಕಲ್ಪವಿಲ್ಲ ...ಕೂತು ತಿನ್ನಲಿ, ಅಪ್ಪನಾಸ್ತಿಯನು.
ಮಹಡಿ ಎರಡೇ ಸಾಕು, ಕಾರೊಂದು, ಅವಗೆ ಎನಗೆ....ಡ್ರೈವರೇ ಬೇಕಿಲ್ಲ,
ನಾನೆ ಅದನೋಡಿಸುವೆ.......ಇಷ್ಟೆ ಕೇಳುವೆ, ನಾನು....ಕಷ್ಟವೇ ದೇವರಿಗೆ?
ಎಂದು ನನಗೆ ತಂದು ಕೊಡುವನೊ, ಇಂಥದೊಂದ ಆ ದೇವರು?

—ರುದ್ರಮ್ಮ.

ಹುಚ್ಚರು ಹೆಚ್ಚುತ್ತಿದ್ದಾರೆ!

ಪ್ರಾಣೇಶ ಪೇಪರೋದುತ್ತ ಕುಕ್ಕರಿಸಿದ್ದವನು ಥಟ್ಟನೆ ಎದ್ದು ಒಂದು ಹಾಳೆಯನ ತಂದು ನನ್ನ ಮುಂದೆ ಹಿಡಿದ. 'ನೋಡಿಲ್ಲಿ' ಎಂದು ಮೂಲೆಯಲ್ಲಿದ್ದ ಸುದ್ದಿಯ ತುಣುಕೊಂದನ್ನು ತೋರಿಸಿದ. ಅಲ್ಲಾ; ಪುಣ್ಯಾತ್ಮರುಗಳು ಪೇಪರಲ್ಲಿ ನೆಹರೂರ ರಷ್ಯಾ ಪ್ರವಾಸ, ಮೆನೋನರ ಶಾಂತಿ ಸಂಧಾನ, ಐಕರ ಹೇಳಿಕೆ, ಡಲ್ಲೇಸರ ಬಿಕ್ಕಳಿಕೆ, ಸಾಲಾರ್ಜುಂಗರ ಬೊಗಳೆ, ರಾಜಾಜಿ ಬಿ. ಸಿ ಜಿ. — ಎಂದೆಲ್ಲಾ ಓದುತ್ತಾರಾದರೆ ಈ ಕೊರಮನಿಗೆ ಆಸಕ್ತಿಯಿರುವುದೆಲ್ಲ ಮೂಲೆಯೊಳಗಿರುವ ಚೂರು ಸುದ್ದಿಗಳಲ್ಲಿ!

ಫ್ರಾನ್ಸಿನ ಒಂದು ಸಂಸ್ಥೆಯಂತೆ — "ಫ್ರೆಂಚ್ ಲೀಗ್ ಫಾರ್ ಮೆಂಟಲ್ ಹೈಜೀನ್" ಅಂತ. ಆ ಸಂಸ್ಥೆಯವರ ವರದಿಯಲ್ಲಿ ಹೇಳಿದಾರಂತೆ — ಜಗತ್ತಿನಲ್ಲಿ ಹುಚ್ಚರು ಹೆಚ್ಚುತ್ತಿದ್ದಾರೆ ಅಂತ. ಈ ಸುದ್ದಿಯೇ ನಮ್ಮ ಪ್ರಾಣೇಶನ ಹುಚ್ಚು ಕೆರಳಿಸಿದ್ದು.

"ಇಲ್ಲಿ ನೋಡು; ಈಜಿಪ್ಟಿನಲ್ಲಿ ಪ್ರತಿ ಸಾವಿರ ಮಂದಿಗೆ ಒಬ್ಬ ಹುಚ್ಚನಿದ್ದಾನಂತೆ. ಅದೇ ಫ್ರಾನ್ಸಿನಲ್ಲಿ ಮುನ್ನೂರಕ್ಕೆ ಒಬ್ಬನಂತೆ. ಇನ್ನು ಅಮೇರಿಕಾದಲ್ಲೋ, ಇನ್ನೂರು ಮಂದಿ ನೆಟ್ಟಗಿದ್ದರೆ ಒಬ್ಬನಿಗೆ ಕೀಲು ಸಡಿಲು .... ಹೇಗಿದೆ!" — ಎಂದು ಗುದ್ದಿದ ಪ್ರಾಣೇಶ.

"ಬಲವಾಗಿದೆ" ಎಂದು ಬೆನ್ನು ಸವರಿಕೊಳ್ಳುತ್ತಾ ದೂರ ಸರಿದು ನಿಂತೆ. ಸದ್ಯ ನಮ್ಮ ದೇಶದ ಅಂಕೆ ಸಂಖ್ಯೆಗಳನ್ನು ಕೊಟ್ಟಿಲ್ಲವಲ್ಲ ಆ ಸಂಸ್ಥೆ, ಬದುಕಿಕೊಂಡೆ ನೀನು" — ಎಂದೆ.

"ಹಾಗಲ್ಲವಪ್ಪ, ನಮ್ಮ ದೇಶದಲ್ಲಿಯೂ ಸಾಕಷ್ಟು ಪ್ರಗತಿ ಆಗಿರಲೇಬೇಕು".

"ಅದರಲ್ಲೇನು ಅನುಮಾನವಿಲ್ಲ. ನೀನು ಬರಬರುತ್ತಾ ಆಗುತ್ತಿರೋದನ್ನ ಕಂಡರೆ ಸಾಲದೆ? ಹಾಗೇನಾದರೂ ಅನುಮಾನವಿದ್ದರೆ ಪಂಚವಾರ್ಷಿಕ ಯೋಜನೆಯಲ್ಲಿ ಹುಚ್ಚಿನ ಪ್ರಗತಿಗೆ ಏನಾದರೂ ವ್ಯವಸ್ಥೆ ಮಾಡೋಹಾಗೆ ಸೂಚನೆ ಕೊಡು ಸರಕಾರಕ್ಕೆ, ಸರಿಹೋಗುತ್ತದೆ" ಎಂದೆ.

"ಅಯ್ಯೋ ಮಂಕೆ!" – ಎಂದು ನಗತೊಡಗಿದ ಪ್ರಾಣೇಶ. ನನಗೆ ಮೆಂಟಲ್ ಆಸ್ಪತ್ರೆಯ ನೆನಪಾಯಿತು.

"ಹುಚ್ಚರ ಸಂಖ್ಯೆ ಹೆಚ್ಚುವುದಕ್ಕೆ ಪ್ಲಾನಿನಲ್ಲಿ ಬೇರೆ ವ್ಯವಸ್ಥೆಯಾಕೆ ಬೇಕೋ ಬೆಪ್ಪೇ! ಸದ್ಯ ಈ ಪ್ಲಾನುಗಳೆಲ್ಲ ಯಶಸ್ವಿಯಾಗಲಿ. ನಮ್ಮ ದೇಶವೂ ಮುಂದುವರಿದ

ದೇಶಗಳ ಮಟ್ಟಕ್ಕೆ ಬರಲಿ. ಆಗ ಎಣಿಸಿ ನೋಡೋಣ. ಹುಚ್ಚರ ಸಂಖ್ಯೆಯಲ್ಲಿ ನಮ್ಮ ದೇಶ ಎಂದಿಗೂ ಹಿಂದೆ ಬೀಳುವ ಹಾಗಿಲ್ಲ. ಈ ವರದಿಯಲ್ಲಿ ಏನು ಹೇಳು ತ್ತಿದಾರೆ ನೋಡು. ನಗರ ಜೀವನದ ಕೋಲಾಹಲ ಹೆಚ್ಚಿದಂತೆಲ್ಲ ಹುಚ್ಚರೂ ಹೆಚ್ಚಾಗುತ್ತಿದ್ದಾರಂತೆ. ನಮ್ಮ ಪ್ಲ್ಯಾನುಗಳು ಮುಂದುವರಿದ ಹಾಗೆಲ್ಲ ಕೋಲಾಹಲ ಗಲಭೆ, ನಗರಗಳಲ್ಲಿ ಯಾಕೆ – ಹಳ್ಳಿ ಹಳ್ಳಿಗಳಲ್ಲಿಯೂ ಹೆಚ್ಚಾಗುತ್ತಾ ಹೋಗುತ್ತದೆ. ಹೆಚ್ಚು ಹೆಚ್ಚು ರೇಡಿಯೋಗಳನ್ನು ತಯಾರುಮಾಡಿ ಅಗ್ಗ ದರದಲ್ಲಿ ದೇಶದಾದ್ಯಂತ ಹಂಚುತ್ತಾರೆ. ಹೊಸ ಹೊಸ ರೇಡಿಯೋ ಸ್ಟೇಷನ್ನುಗಳನ್ನು ತೆರೆಯುತ್ತಾರೆ. ಹಾಡುವವರು ಸಾಕಷ್ಟು ಮಂದಿ ಸಿಗದಿದ್ದರೆ ಅರಚುವವರನ್ನಾದರೂ ತಂದು ನಿಲ್ಲಿಸಿ ಪ್ರೋಗ್ರಾಂ ಭರ್ತಿಮಾಡುತ್ತಾರೆ. ಶಾಲೆ, ಕಾಲೇಜು, ಬೀಡಿ ಅಂಗಡಿ, ಆಸ್ಪತ್ರೆ, ಅರಮನೆ, ಸೆರೆಮನೆ, ಆಫೀಸು, ಮಾರ್ಕೆಟ್ಟು, ಮದುವೆ ಮುಂಜಿ ಮನೆಗಳು ಇವೆಲ್ಲವೂ ಹೋಟಲುಗಳ ಕೂಡೆ ಸ್ಪರ್ಧೆಮಾಡುತ್ತವೆ. ಎಂಥಾ ಕೋಲಾಹಲ! ಆಗ ಹುಚ್ಚು ಕೆರಳದೆ ಇರುತ್ತದೆಯೆ? ಅಷ್ಟು ಯಾಕೆ........"

ಇನ್ನು ಇವನದು ಮುಗಿಯುವ ಹಾಗಿಲ್ಲವೆಂದು ನಾನು ಟವಲೆಳೆದುಕೊಂಡು ಬಚ್ಚಲುಮನೆ ಸೇರಿ ಬಾಗಿಲೆಳೆದುಕೊಂಡೆ. ಪಾಪಿ ಅಲ್ಲಿಗೂ ಹಿಂಬಾಲಿಸಿ ಹೊರಗೆ ನಿಂತು ಪೀಡಿಸಬೇಕೆ?

"ಈಗ ನೋಡು, ಇಲೆಕ್ಷನ್ ಐದು ವರ್ಷಕ್ಕೊಮ್ಮೆ ಬರುತ್ತದೆ. ಆ ವರುಷವೆಲ್ಲ ಎಂಥ ಕೋಲಾಹಲ! ಎಂಥ ತಲೆ ಸಿಡಿತ! ಎಂಥ ಹೊಟ್ಟೆಯುರಿ! ವರ್ಷ ವರ್ಷವೂ ಚುನಾವಣೆಗಳನ್ನೇರ್ಪಡಿಸಿದರೆ ತೀರಿತು. ಆಗ ಎಲ್ಲರ ಮೆದುಳುಗಳೂ ಸದಾ ಕರಿದ ಹಪ್ಪಳಗಳಂತಾಗುತ್ತವೆ. ಕೆಲವಂತೂ ಸೀದುಹೋಗುತ್ತವೆ. ಅಮೇರಿಕದಲ್ಲಿ ಇನ್ನೂರ ಕ್ಕೊಬ್ಬ ಹುಚ್ಚ ಅಂತ ತಾನೆ ಇವರು ಹೇಳೋದು? ವರ್ಷಕ್ಕೊಮ್ಮೆ ಚುನಾವಣೆ ನಡೆಯೋ ಏರ್ಪಾಟು ಮಾಡಿದರೋ ನಮ್ಮ ದೇಶದಲ್ಲಿ ಒಬ್ಬ ಹುಚ್ಚನಿಗೆ ಒಬ್ಬ ಅರೆಹುಚ್ಚ ಎಂಬಷ್ಟು ಪ್ರಗತಿಯಾಗುತ್ತದೆ...."

"ಬಿಸಿನೀರು ಚೆಲ್ತೀನೆ ಜೋಕೆ! ನಡೀ ಆಚೆಗೆ" – ಎಂದು ಆರ್ಭಟಿಸಿದೆ — ಒಳಗಿನಿಂದಲೇ.

ಆಗ ಆತ ಕೊಂಚ ದೂರ ಹೋದನೇ ಹೊರತು ತನ್ನ ರಗಳೆ ನಿಲ್ಲಿಸಲಿಲ್ಲ. ವಿವಾಹ ಸಂಬಂಧ ಮಸೂದೆಗಳಿಂದ ಹುಚ್ಚಿನ ಅಭಿವೃದ್ಧಿಯನ್ನು ಸಾಧಿಸುವ ಕ್ರಮ ವನ್ನು ವರ್ಣಿಸುತ್ತಾ ನಿಂತ. "ಕೇಂದ್ರದಲ್ಲಿ ಹುಚ್ಚನ್ನು ಹೆಚ್ಚಿಸುವ ಖಾತೆಯೊಂದನ್ನು ತೆರೆದರೆ ನೀನೇ ಮಂತ್ರಿಯಾಗುತ್ತೀ ಮಹರಾಯಾ, ಬಾಯಿ ಮುಚ್ಚು" — ಎಂದು ಬೊಬ್ಬಿರಿದೆ. ಅಷ್ಟರಲ್ಲಿ ಪೇಪರಿನ ಹುಡುಗ ಮತ್ತೊಂದು ದಿನಪತ್ರಿಕೆಯನ್ನು ತಂದ ನೆಂದು ಕಾಣುತ್ತದೆ. ಅಂತೂ ಪೀಡೆ ತೊಲಗಿತು. ಜಗತ್ತಿನಲ್ಲಿ ಹುಚ್ಚರು ಹೆಚ್ಚು ತ್ತಿದ್ದಾರೆ ಎಂಬುದಂತೂ ನಿಜ ನಿಜ ಅನ್ನಿಸಿತು.

— ರಾಮಿ.

ಮೋಹನ ಮಸಾಲೆ

ಪ್ರಾಣೇಶ ಯಾವಾಗಲೂ ಹಾಗೆಯೇ; 'ಸು' ಎಂದರೆ ಸಾಕು – 'ಸುಕ್ಕಿನುಂಡೆ' ಎಂದು ಮುಂದುವರಿಸುತ್ತಾನೆ ಸಾಯಂಕಾಲ ಸಿಟಿ ಹೋಟಲಿನಲ್ಲಿ ಹೊಡೆದು ಬಂದ ಮಸಾಲೆ ಗಂಟಲು ಕೆರೆಯುತ್ತಿದೆ ಎಂದು ಹೇಳಿದೆನೋ ಇಲ್ಲವೋ ತಮ್ಮೂರಿನ ನಾರಣಪ್ಪನ ಹೋಟಲಿನ 'ಮೋಹನ ಮಸಾಲೆ'ಯ ವೈಭವವನ್ನು ಕಥೆ ಮಾಡಿ ಒತ್ತರಿಸಿಯೇ ಬಿಟ್ಟ.

ಪ್ರಾಣೇಶನಊರಾದ ಮಾದಲಾಪುರದ ಹೆಸರು ಎಲ್ಲರೂ ಕೇಳಿರಲಿಕ್ಕಿಲ್ಲ ಆದರೆ ಅಲ್ಲಿನ 'ಮೋಹನ ಮಸಾಲೆ' ಒಂದಲ್ಲ ಒಂದು ದಿನ ಸೀಮೆಯ ಮೂಲೆ ಮೂಲೆಯಲ್ಲಿ ಮನೆ ಮಾತಾಗುತ್ತದೆ ಎಂದು ಪ್ರಾಣೇಶನ ಭರವಸೆ. ಅದರ ವರ್ಣನೆಯನ್ನು ಅವನೇ ಮಾಡಬೇಕು.

ನಾರಣಪ್ಪನ ಹೋಟಲಿನ ಮೋಹನ ಮಸಾಲೆ!....ಆಹ! ನಗರದ ಸಾಹೇಬರುಗಳೇ ಮೋಹನವನ್ನು ಮೆಲ್ಲುವ ಪ್ರೇರಣೆಯುಂಟಾಗಿ ಮಾದಲಾಪುರದ ಕಡೆಗೆ ಸಾಯಂಕಾಲದ ಹೊತ್ತು ಕಾರುತಿರುಗಿಸಿದ್ದುಂಟಂತೆ. ಅಷ್ಟೇಕೆ, ಒಂದು ಕಾಲದಲ್ಲಿ ಮಿಲಿಟರಿ ಜನಗಳು ಥಟ್ಟನೆ ಜೀಪುತ್ತ ಬಂದು ನಾರಣಪ್ಪನ ಹೋಟಲಿನ ಮೇಲೆ ಧಾಳಿಮಾಡಿ ಕೇಳಿದಷ್ಟು ಕಾಸು ತೆತ್ತು ಎಲ್ಲ ಮಸಾಲೆಗಳನ್ನು ತಾವೇ ಕಟ್ಟಿಸಿಕೊಂಡು ಹೋಗಿ ಸ್ಥಳೀಕರಿಗೆ ನಿರಾಶೆಯುಂಟುಮಾಡಿದ್ದುಂಟಂತೆ.

ಮೋಹನ ಮಸಾಲೆ ಅಷ್ಟೊಂದು ಅಮೂಲ್ಯವೆನಿಸುವುದಕ್ಕೆ ಮುಖ್ಯಕಾರಣ ಅದರ ರುಚಿಯೇ ಆದರೂ ಇನ್ನೊಂದು ಕಾರಣವೂ ಇತ್ತು. ಆಗ ಅದು ನಿಯಂತ್ರಿಸಲ್ಪಟ್ಟ ವಸ್ತು ವಿಶೇಷ. ಆಗ ಏನು ಇಂದಿಗೂ ಹಾಗೆಯೇ ಅಂತೆ. ದಿನಾಲೂ ಇನ್ನೂರೈವತ್ತಕ್ಕಿಂತ ಹೆಚ್ಚು ದೋಸೆ ಹುಯ್ಯಕೂಡದೆಂದು ನಾರಣಪ್ಪನ ಕಟ್ಟಾಜ್ಞೆಯಿತ್ತಂತೆ. ಕೆಲವು ಅಮೂಲ್ಯ ಗ್ರಂಥಗಳನ್ನು ನಂಬರು ಹಾಕಿ ನಾನೂರೋ ಐನೂರೋ ಪ್ರಕಟಿಸುತ್ತಾರಲ್ಲ – ಹಾಗೆಯೇ ಇನ್ನೂರೈವತ್ತರ ಗಡಿದಾಟಿದ ಮೇಲೆ ಹಿಟ್ಟು ಉಳಿದಿದ್ದರೂ ಅದನ್ನು ಮಸಾಲೆಗಳಾಗಿ ಮಾರ್ಪಡಿಸಲು ನಾರಣಪ್ಪ ಒಪ್ಪುಆರ. ಹೀಗೆ ಮಾದಲಾಪುರದ ಮೋಹನ ಮಸಾಲೆ ಪುಣ್ಯವಿದ್ದವರಿಗೆ ಮಾತ್ರ ಲಭಿಸುವ ವಸ್ತುವಂತೆ. ಅದೇ ಆದರ ಮೋಹಕತೆಗೆ ಕಾರಣವಾಯಿತಂತೆ.

ಮೋಹನ ಮಸಾಲೆಯ ಪ್ರಭಾವ ಇಷ್ಟರಮಟ್ಟಿಗಿದ್ದರೂ ಅದು ರಾಜಕೀಯ ರಂಗವನ್ನು ಪ್ರವೇಶಿಸಬಹುದೆಂದು ಯಾರೂ ಎಣಿಸಿರಲಾರರು. ಅದು ಹೋಗಲಿ; ನಾರಣಪ್ಪ ಮಾದಲಾಪುರದ ಮುನಿಸಿಪಲ್ ಚುನಾವಣೆಯಲ್ಲಿ ಉಮೇದುವಾರನಾಗುತ್ತಾನೆಂದು ಯಾರಿಗೆತಾನೆ ಕನಸು ಅದರಲ್ಲೂ ಜೋಡಿದಾರ್ ಶ್ರೀಕಾಂತಯ್ಯನಿಗೆ ಎದುರಾಳಿಯಾಗಿ....!

ಆಗ ವೋಟುದಾರರಿಗಂತೂ ಪ್ರಾಣಸಂಕಟವೇ ಒದಗಿತಂತೆ. ಯಾರನ್ನು ಬಿಡುವುದು, ಯಾರನ್ನು ಹಿಡಿಯುವುದು. ಶ್ರೀಕಾಂತಯ್ಯ ಹಲವಾರು ಕಾರಣಗಳಿಂದ ಎಲ್ಲರಿಗೂ ಬೇಕಾದವನೆಂಬುದೇನೋ ನಿಜ ಆದರೆ ನಾರಣಪ್ಪನ ಮೋಹನವನ್ನು ತೊರೆದು ಬದುಕುವುದುಂಟೆ? ಇಂಥ ಬಿಕ್ಕಟ್ಟು ತಲೆದೋರಿತಲ್ಲ ಎಂದು ಕಳವಳಪಡುತ್ತ ಕೆಲವರು ನಾರಣಪ್ಪನನ್ನು ಅಳ್ಳಾಡಿಸಿ ನೋಡಲು ಪ್ರಯತ್ನಿಸಿದರು.

"ನಿಮಗೆ ಯಾಕೆ ಸ್ವಾಮಿ ಈ ಹಾಳೂರಿನ ಮುನಿಸಿಪಲ್ ಮೆಂಬರಿಕೆ? ನಿಮ್ಮ ಮೋಹನ ಮಸಾಲೆಯ ಮಹಿಮೆ ಸೀಮೆ ಸೀಮೆಗೆ ಗೊತ್ತಾಗುತ್ತಾ ಇದೆ; ಅಂದಮೇಲೆ ಮೆಂಬರಾಗಿ ನೀವು ಕೀರ್ತಿ ಶಿಖರ ಕಟ್ಟಬೇಕಾದ್ದೇನಿದೆ. ಸದ್ಯದಲ್ಲಿಯೇ ರಾಜಧಾನಿಯ ಹೋಟಲು ಮಾಲಿಕರೆಲ್ಲ ನಿಮ್ಮ ಮಸಾಲೆಯ ಪೇಟೆಂಟಿಗೆ ಹೊಡೆದಾಡಿದರೆ ಸರಿತಾನೆ? ಆ ಶ್ರೀಕಾಂತಯ್ಯನಿಗೆ ಮಾಡೋಕೆ ಬೇರೆ ಕೆಲಸವಿಲ್ಲ. ಅವನಿಗೇ ಇರಲಿ ಈ ಮೆಂಬರಿಕೆ ಹಾಳಾದ್ದು" – ಎಂದೆಲ್ಲ ಪುಂಗಿ ಬಾರಿಸಿ ನೋಡಿದರು. ಆದರೇ ಈತನೋ ಜಪ್ಪಯ್ಯ ಎಂದರೂ ಜಗ್ಗಲಾರದ ಹಯ. ಮಂಗಮುಷ್ಟಿ ಹೇಳಿ ಕೇಳಿ. "ಆಗದು ಒಂದು ಕೈ ನೋಡೇ ಬಿಡ್ತೀನಿ ಕಣ್ರೀ" – ಎಂದು ಶಾಲು ಬಿಗಿದುಬಿಟ್ಟ ಸೊಂಟಕ್ಕೆ ಇನ್ನೇನು ಮಾಡುವುದಕ್ಕೆ ಬರುತ್ತದೆ?

ಚುನಾವಣೆ ಬಂತು. ಪ್ರಚಾರಕ್ಕೆ ಪ್ರಾರಂಭವಾಯಿತು. ಶ್ರೀಕಾಂತಯ್ಯ ನೋಟಿನ ಕಂತೆಗಳನ್ನು ನೆಚ್ಚಿದರೆ ನಾರಣಪ್ಪ ಮೋಹನವೇ ನನ್ನ ಮುದ್ದು ಎಂದು ಹಿಟ್ಟು ರುಬ್ಬಿಸಿದ. ಇದ್ದಕ್ಕಿದ್ದ ಹಾಗೆ ಮೋಹನ ಮಸಾಲೆಯ ಮೇಲಿದ್ದ ನಿಯಂತ್ರಣ ಹೋಯಿತು. ಸಾಯಂಕಾಲ ಐದರಿಂದ ಏಳುಘಂಟೆಯವರೆಗೆ ಮಾತ್ರ ಎಂದಿದ್ದ ನಿಯಮವೂ ಹೋಯಿತು. ಬೆಳಗಿಂದ ರಾತ್ರಿಯತನಕ ಏರ್ಪಾಡಾಯಿತು.

ಇತ್ತ ಶ್ರೀಕಾಂತಯ್ಯನ ಪ್ರಚಾರವೂ ಬಿರುಸಾಗಿ ಸಾಗಿತು. ವೋಟಿಗೆ ಹತ್ತು ಎನ್ನುತ್ತಿದ್ದಾತ ಪಂಚೆ ಸೀರೆ ಎಂಬಲ್ಲಿಯವರೆಗೂ ಬಂದನಾತ. ವ್ಯಾನ್ ಹತ್ತಿ ಬೀದಿಯಲ್ಲಿ ಬೊಬ್ಬಿರಿಯಲು ನಗರದಲ್ಲಿ ಪಳಗಿದ ಬಾಯ್ಬಡಕರ ಒಂದು ತಂಡವನ್ನೇ ತರಿಸಿದ ಆದರೂ ಮೋಹನ ಮಸಾಲೆ ವೋಟುರುಗಳ ಮನಸ್ಸಿನಲ್ಲಿ ಎಂಥ ಬಿರುಗಾಳಿಯನ್ನುಂಟುಮಾಡುತ್ತದೋ ಎಂದು ಅವನು ಒಳಗೊಳಗೇ ನಡುಗಿದ.

ನಾರಣಪ್ಪನಿಗೂ ಶಂಕೆಯಿಲ್ಲದಿರಲಿಲ್ಲ. ವೋಟನ್ನು ಪೆಟ್ಟಿಗೆಯಲ್ಲಿ ತುಂಬುವ ಹೊತ್ತಿಗೆ, ಬಾಯಲ್ಲಿ ಮಸಾಲೆಯ ತುಣುಕು ಇಲ್ಲದಿರುವಾಗ ಯಾರು ಯಾರು ಏನೇನು ಮಾಡುತ್ತಾರೆಂದು ಹೇಗೆ ಹೇಳಬಹುದು – ಆದರೂ ಅವನು ಎದೆಗೆಡಲಿಲ್ಲ. ಮಸಾಲೆಯ ದರವನ್ನು ಅರ್ಧ ಇಳಿಸಿದ. ಜನರು ನುಗ್ಗಿಯೇ ನುಗ್ಗಿದರು.

ಇಲೆಕ್ಷನ್ ಮುನ್ನಾದಿನ ಸಾಯಂಕಾಲವಂತೂ ಭರ್ಜರಿ ತಳಿರು ತೋರಣ ಹಾರಿಸಿ, ನಾಗಸ್ವರ ಊದಿಸಿ, ಢೋಲು ಗುದ್ದಿಸಿದ ಮಸಾಲೆಯನ್ನು ಮುಫತ್ತಾಗಿ ಹಂಚಿದ!

ಜನರು ಮಸಾಲೆ ಮುರಿದಿದ್ದೂ ಮುರಿದಿದ್ದೇ. ಪ್ರತಿಪಕ್ಷದ ಪ್ರಚಾರಕರೂ ಕೂಡ ತೋರಣದ ಸಂದಿನಲ್ಲಿಯೇ ನುಗ್ಗಿ ಒಳಗೆ ಬಂದರು. ಹತ್ತು ಘಂಟೆಯವರೆಗೂ, ಸಮಾರಾಧನೆ! ಯಾರು ಯಾರು ಎಷ್ಟೆಷ್ಟು ತಿಂದರೋ! ಅಂತೂ ಎಲ್ಲರ ಬಾಯಲ್ಲಿಯೂ ಶ್ಲಾಘನೆ – ಮೋಹನನನ್ನು ಕುರಿತು; ನಾರಣಪ್ಪನನ್ನು ಕುರಿತು.

ನಾರಣಪ್ಪನ ಪ್ರಚಾರದ ವೈಖರಿ ಹೀಗಿದ್ದರೆ ಶ್ರೀಕಾಂತಯ್ಯನೇನು ಸುಮ್ಮನಿದ್ದನೆ? ಭಾಷಣ ಪ್ರವೀಣರಿಂದಲೂ ಬೀದಿ ಅರಚಕರಿಂದಲೂ ಕೇರಿ ಕೇರಿಗಳಿಗೆ ಕಿವುಡು ಬರುವಂತೆ ಕೂಗಿಸಿದ. ನಾರಣಪ್ಪನ ಹೋಟಲಿನ ಮುಂದೆ ವ್ಯಾನ್ ನಿಲ್ಲಿಸಿ ಅದರೊಳಗಿಂದ ಹುಡುಗೀರು "**ಮೋಹನ ಮೋಹನ ಕರೆವುದು ಯಮುನ**" – ಎಂಬ ಚುನಾವಣೆ ಗೀತೆಯನ್ನು ಮೈಕ್ ಮೂಲಕ ಹಾಡಲು ಏರ್ಪಡಿಸಿದ. ಆದರೇನು, ಅಂಥ ಹಾಡು ಕೂಗಿ ಕೂಗಿ, ಪಾಪ, ಆ ಹೆಮ್ಮಕ್ಕಳ ಬಾಯಲ್ಲಿ ನೀರೂರಿದ್ದೇ ಬಂತು. ಒಳಗೆ ಮಸಾಲೆ ಮೆಲ್ಲುತ್ತಿದ್ದ ಆಸಾಮಿಗಳು, ಯಮುನಲ್ಲ – ಅವನಪ್ಪ ಬಂದರೂ ತಟ್ಟೆಕೆಳಗಿಡುವಂತೆ ಕಾಣಲಿಲ್ಲ

ಅಂತೂ ಇಂತೂ ಚುನಾವಣೆಯ ದಿನ ಬಂತು. ಬೆಳಗಾಗಿ ಮಧ್ಯಾಹ್ನವಾಗುತ್ತ ಬಂದರೂ ವೋಟರುಗಳ ಸುಳಿವಿಲ್ಲದ್ದು ಕಂಡು ಶ್ರೀಕಾಂತಯ್ಯ ತಂಗಾಲಾದ. ಎಲ್ಲರ ಮನೆಗಳಿಗೂ ನುಗ್ಗಿದ. ಎಲ್ಲಿ ಕೇಳಿದರೂ ಒಂದೇ ಸಮಾಚಾರ. "ಮೈ ಚೆನ್ನಾಗಿಲ್ಲ ..." "ಹೊಟ್ಟೇನೇ ಸರಿಯಿಲ್ಲ" "ಇನ್ನೂ ಎದ್ದೇ ಇಲ್ಲ" – ಇತ್ಯಾದಿ. ಹೆಂಗಸರೇನೋ ಸುಖವಾಗಿದ್ದರು. ಆದರೆ ಗಂಡಸರ ಸ್ಥಿತಿ ಹೀಗಿರುವಾಗ ಏನು ಚುನಾವಣೆ ಏನು ವೋಟು!

ಶ್ರೀಕಾಂತಯ್ಯ ಹಣೆ ಹಣೆ ಬಡಿದುಕೊಂಡ. ಏಕೆಂದರೆ ನಾರಣಪ್ಪನ ಅಭಿಮಾನಿಗಳು ಕೆಲವರು ಚೆನ್ನಾಗಿದ್ದರು ಅವರೆಲ್ಲ ಮತದಾನ ಮಾಡಿದರು. ಕೊನೆಗೂ ನಾರಣಪ್ಪನೇ ಮೆಂಬರಾದನ್ನೆನ್ನಿ.

ಆವತ್ತು ಸಂಜೆ ಹೊತ್ತಿಗೆ ಮಿಕ್ಸ್ಚರು, ಮಾತ್ರೆ ಕಷಾಯ, ಚೂರ್ಣಗಳ ನೆರವಿನಿಂದ ಹಾಸಿಗೆ ಹಿಡಿದವರೆಲ್ಲ ಚೇತರಿಸಿಕೊಂಡವರೆಲ್ಲ ಯಾಕೆ ಹೀಗಾಯಿತೆಂದು

ವಿಚಾರಕ್ಕೆ ತೊಡಗಿದರು. ನಾರಣಪ್ಪ ಮಸಾಲೆಗೆ ಏನೋ ಮದ್ದು ಬೆರೆಸಿರಬೇಕೆಂದು ಅವರು ಶಂಕಿಸಿದರು. ಹೊಟ್ಟೆಬಾಕರಿರಾ ನಿಮ್ಮನ್ನು ನಂಬಿ ಕೆಟ್ಟೆ ಎಂದು ಹಣೆ ಹಣೆ ಬಡಿದುಕೊಂಡ ಶ್ರೀಕಾಂತಯ್ಯ. ಚುನಾವಣೆ ರದ್ದಾಗಬೇಕೆಂದು ಗುಲ್ಲು ಪ್ರಾರಂಭ ವಾಯಿತು. ಮಸಾಲೆಗೆ ಮದ್ದು ಬೆರೆಸಿ ಚುನಾವಣೆಯಲ್ಲಿ ಗೆದ್ದನೆಂದು ದೂರು ಹೋಯಿತು. ವಿಚಾರಣೆ ನಡೆಯಿತು. ಎಷ್ಟೆಷ್ಟು ದೋಸೆ ತಿಂದಿರೆಂದು ಸಾಕ್ಷಿದಾರ ರನ್ನು ವಿಚಾರಿಸಿದಾಗ ಹತ್ತು ಎಂಟು ಆರು ಎಂದೆಲ್ಲ ಉತ್ತರ ಬಂತು. ಅಷ್ಟು ಮಸಾಲೆ ನುಂಗಿದರೆ ಮದ್ದು ಹಾಕದಿದ್ದರೂ ಹೊಟ್ಟೆ ಕೆಡುತ್ತದೆ ಎಂಬುದು ಸಿದ್ಧಾಂತವಾಯಿತು. ವಿಚಾರಣಾಧಿಕರಿಗಳಿಗೇ ನಾರಣಪ್ಪ ಆ ಅನುಭವ ಉಂಟು ಮಾಡಿಸಿದ್ದ.

ಅಲ್ಲಿಗೂ ನಿಲ್ಲಲಿಲ್ಲ. ಅಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳಾದುವಂತೆ. ಆದರೆ ಮಾಮೂಲಿನಂತೆ ಅಲ್ಲಿಗೆ ಅದು ಮುಗಿದುಹೋಯಿತು.

ಅಂತೂ ನಾರಣಪ್ಪನ ತೋಡೇ ಮೇಲಾಯಿತು. ಮೋಹನ ಮಸಾಲೆಯ ಪ್ರಭಾವ ಬಹುವಾಗಿ ಹೆಚ್ಚಿತು ಮುಂದೆ ಅದಕ್ಕೆ ಉಜ್ವಲ ಭವಿಷ್ಯವಿದೆ ಎನ್ನುತ್ತಾನೆ ಪ್ರಾಣೇಶ.

ಅಂತೂ ಅವನ ಬೈರಿಗೆ ಇಷ್ಟಕ್ಕೇ ಮುಗಿಯಲಿಲ್ಲ ಬದುಕಿದೆವು ಬಿಡಿ.

—ರಾಮಿ.

—o—

ಹಾದಿಯಲ್ಲಿ ಕೇಳಿಸಿದುದು

"ಏನಯ್ಯಾ, ಈ ವರ್ಷವಂತೂ ಸೀಟಿನ ಬೇಟೆಯಲ್ಲಿ ಕಮಿಟಿಗಳನ್ನ ಭೇಟಿ ಮಾಡಿದ್ದಾಯ್ತು. ಇನ್ನು ಮುಂದಿನ ವರ್ಷದ ಹೊತ್ತಿಗೆ-. ಈಗ ವಿದ್ಯಾದಾನ ಮಾಡ್ತಾ ಇರೋರೆಲ್ಲಾ ಕಮಿಟಿಗಳಲ್ಲಿ ಸೇರಿದರೆ ಏನಯ್ಯಾ ಗತಿ?"

ವೈದ್ಯರಲ್ಲಿ ವಿಷನಿಮಿಷಗಳು :—

"ನಂಗೇನಾಗಿಲ್ಲ ಡಾಕ್ಟ್ರೇ – ನಮ್ಮೆಜಮಾನ್ರನ್ನ ಸ್ವಲ್ಪ ನೋಡಿ – ಅವರ ಮನಸ್ಸಿನಲ್ಲಿ ತಾವು ಒಂದು ಗಿಣಿ ಅನ್ಕೊಂಡಿದ್ದಾರೆ. ಗಿಣಿ ಹಾಗೇ ಹಾಡ್ತಾರೆ – ಸ್ವಲ್ಪ ಸರಿಯಾಗಿ ನೋಡಿ ಡಾಕ್ಟ್ರೇ"

"ಎಲ್ಲಿದ್ದಾರಮ್ಮ – ಕರ್ಕೊಂಬನ್ನಿ – ನಿಮ್ಮೆಜಮಾನ್ರನ್ನ"

"ಇಲ್ಲೇ ಇದ್ದಾರೆ ನೋಡಿ – ಕರ್ಕೊಂಡು ಬಂದಿದ್ದೀನಿ – ಈ ಪಂಜರದಲ್ಲೇ ಕೂತಿದ್ದಾರೆ"

ಕಾಕದೂತಾರ್ಪಣಂ

ಮುಗಿಸಲಿರುವೆನು ಮುಂದೆ, ಅದಕೆಂದು ನಾನಿಂದೆ
ನಿನ್ನ ನೆಚ್ಚರಿಸುತಿಹೆ ರಾಶೀ ಮಹಾಶಯಾ
ನೀನಾರೊ ನಾನಾರೊ ಬರಿಯ ಲೇಖಕ ಮೇಣು
ಸಂಪಾದಕರ ಬಂಧ ಬಿಗಿಯೆ ನಮ್ಮಿಬ್ಬರನು
ಮಿಡುಕಿ ಕಣ್ ಬಿಡುತಿಹೆವು.
'ಪೋಗೆಲವೊ ಕುಕವಿ; ಕಸವ ಹೊಡೆಯುವದಾಸ
ನೀನಾಗಿ ಹೋಗೆಂದು' ಅಬ್ಬರಿಸಿ ಕೆಂಗಣ್ಣ ಬಿಟ್ಟೆ
ನಾ ಬೆದರದೆಯೆ ತಂದಿಟ್ಟೆ ಲೇಖನವ, ಲೇಖನದ
ರಾಶಿಯನೆ ನಿನ್ನ ಮುಂದೊಟ್ಟಿದೆ ನಲ್ಮೆ
ಪ್ರಕಟಿಸೈ ನೀ ನೆಂದು ಬೇಡಿದೆ, ಕಾಡಿದೆ
ಬೆದರಿ ನೀ ಕಣ್ಮುಚ್ಚಿ ಬೆವೆತೆ ಮೂರ್ಛೆಗೆ ಸಂದೆ
ಬಿಡಲಿಲ್ಲ ನಾನು.
ತರಲಿಹೆನು ಕಸಗವಿತೆಯೊಂದ ನೀ ಕಾದಿರೈ, ಇದ
ನಿನಗೆ ತಿಳಿಸದಲೆ, ಎಲ್ಲಿಡೆಗು ಪ್ರಕಟಿಸದೆ
ಮೊದಲೆ ಅದನಿನಗೆ ನಾಕಳಿಸಿದೊಡೆ ನೀನದನು
ದಿಟದ ನಲ್ಮನೆಗೆ ಅಟ್ಟುವೆಯೆಂದು ನಂಬಿದೆನು
ಅಗ್ನಿಲೋಕಕೊ ವಾಯು ಲೋಕದ ವಿಹಾರಕೋ
ವರುಣ ನುರುತರದ ವೈಭವದ ಆಳಕೊ ಕಳಿಪೆ
ನೀನೆಂದು ಬೆದರಿದೆನು ಅಂತೆ ಈ ಮುಂಕಗ್ಗ
ಮೇಘ ದೂತದ ಗರುಡನಿದುರೊಂದು ಗುಬ್ಬಿಯನೊ
ಕಾಗೆಯನೊ ಕಪ್ಪೆಯನೊ ಕಳುಹುವುದೆ! ಇಲ್ಲೆಂದು
ಎಕ್ಸ್‌ಕ್ಲೇಮಿದನು ದತ್ತ ಅಂಬಿಕಾತನಯ
ಏಕಾಗ ಬಾರದೈ? ಛಾಲೆಂಜುವೆನು ನಾನು
ಕಾಗೆಯೋ ಮೇಘವೋ ಕೆಲಸ ಕೆಡಿಸಲು ಯಾರು
ಮಿಡುಕಿದರೆ ಏನಂತೆ?
ಕಾಳಿದಾಸನು ನಿನ್ನೆ ವಿಜಯ ಕೆಫೆಯಲಿ ಸಿಕ್ಕು

ಕೇಳಿದನು, ಏನರಾಸೇ ಪ್ರೇಮ ದೌತ್ಯಕ್ಕೆ
ಕಾಗೆಯೇ ಬೇರೆ ಏನಿರಲಿಲ್ಲವೇ ನಿನಗೆ?
ನಾನೆಂದೆ 'ಉಜ್ಜಯನಿ ರಾಜಸಭೆಯುವ ನೀನು
ಮೇಘವನು ಪ್ರೇಮದೌತ್ಯಕ್ಕೆ ಕಳುಹಿದೆ ನಾನೂ
ಮುಗಿಲು ಹಳ್ಳಿಯ ಮಂಡಿಯಂಗಡಿಯ ಟೈಪಿಸ್ಟು
ಕರಿಬೆಲ್ಲ ದಂತಿರುವ ಕಾಗೆಯನು ಕಳುಹುವೆನು
ಅದು ಇರಲಿ ಏನಾಯ್ತು ನಿನ್ನ ಮೇಘದ ದೂತ
ದೆಪಿಲೋಗು ಪೇಳುವೆಯ?'
ಕಾ—'ಹಿಂದಾ ಮಹಾಮೇಘ ಹೋಳಲ ಪಕ್ಕದಲಿ
ಇರುತಿರುವ ರಾಮ ಗಿರಿಯಿಂಪೊರಟು, ಕೊಡೆ
ರಿಪೇರಿಗರಿ ಗರನೆಬ್ಬಿಸಿ, ಪ್ಯಾಂಟಮೇಲೆಲ್ಲ
ಚಪ್ಪಲೀ ರಾಡಿಯನು ಸಿಂಚಿಸುತ ಮುಂಬರಿದು
ನೀಚ ಗಿರಿಯಲಿ ನಿಂದು, ಉಜ್ಜಯನಿಯಲಿ ಮೆರೆದು
ಮೇರು ಬೆಟ್ಟಕೆ ಪೋಗಿ, ಹಿಮಮಾನವಗೆ ಬೆದರಿ
ಹಿಂತಿರುಗಿ ಬಂದು ತಾನೊರೆದಿತಾ ಯಕ್ಷಂಗೆ
'ದೇಖೋಜಿ ಹೋಗಯಾ ಕಾಂಖರಾಬ್'
ನಾನು – 'ಆದರಾಂಕಳಿಸುವೀ ಕಾಗೆ ಸೆಪ್ಟಂಬರಿನ
ವಿಷಮದ ಪರೀಕ್ಷೆಯಲಿ ನರಳುತಿಹ ಯುವಕರನು
ಯುವತಿಯರ ನೆಚ್ಚರಿಸಿ ಪ್ರೇಮದಾನವ ಮಾಡಿ
(ದಲ್ಲಾಳಿ ಪಡೆಯದಲೆ) ಕನ್ನಡದ ನಾಡಿನಲಿ
ಕಾಕಾರವದ ವಿಜಯ ಭೇರಿಯನು ಹೊಡೆಯಲಿದೆ'
ಇದ ಮೀರಲಸದಳವು, ವಿಧಿಬರೆದ ಬರೆಹವಿದು
ಕನ್ನಡದ ಬಡ ಜನತೆ ಯುಗ ಯುಗದಿ ಬಯ ಬಯಸಿ
ನನ್ನಂಥ ಕವಿಯನೂ ನಿನ್ನಂಥ ಸಂಪಾದನನೂ ಪಡೆದು
ಒದರುತಿದೆ ತಪ್ಪು ನಮ್ಮಲ್ಲಿಲ್ಲ
ಬೆಲೆಯ ಕೃತಿಯಲ್ಲವಿದು ಗಾವಿಲರ ದುಷ್ಕೃತಿ
ಪಡೆದುದ ನುಣ್ಣದೆಯೆ ಬೇರೆ ದಾರಿಯೆ ಇಲ್ಲ
ಇದ ನಿನಗೆ ಅರ್ಪಿಸುವೆ, ಇದನಿಕ್ಕು ಪೇಪರಿಗೆ
ನೀನಿಲ್ಲದಿನ್ನಾರು ಗತಿಯೆನಗೆ?

ಅ. ರಾ. ಸೇ.

★ ಕಮಿಟೀ ತಂತ್ರ ★

ಮಿಲ್ಲು ಬಟ್ಟೆಗಳ ಹಾವಳಿಯಿಂದ ಕೈಮಗ್ಗಗಳು ಮೂಲೆಗೆ ಬಿದ್ದುವು, ಎಂದು ಶ್ರೀ ರಾಜಾಜಿ ಮುಂತಾದವರು ಕೂಗೆಬ್ಬಿಸಿ, ಕಮಿಟಿ ಒಂದು ರಚನೆಯಾಗಿ, ಈಗ, ಮಿಲ್ಲು ಬಟ್ಟೆಗಳಮೇಲೆ ಸೆಸ್‌ಹಾಕಿ, ಕೈಮಗ್ಗದ ಬಟ್ಟೆಗಳಿಗೆ ರಿಬೇಟ್ ಕೊಡಲಾಗಿದೆ.

ಇದನ್ನು ನೋಡಿ, ಕೊಟ್ಟಣದವರು ಗುಲ್ಲೆಬ್ಬಿಸಿ, ರೈಸ್ ಮಿಲ್ಲುಗಳಮೇಲೆ ಕದನ ಹೂಡಿ, ಕಮಿಟಿ ರಚಿಸಿದರು. ಅವರು ಮೊನ್ನೆ ವರದಿ ಒಪ್ಪಿಸಿದಾರೆ. ರೈಸ್ ಮಿಲ್‌ನಲ್ಲಿ ಮೆಷೀನ್‌ಮಾಡಿದ ಚೀಲ ಒಂದಕ್ಕೆ ೬ ಆಣೆ ಸೆಸ್‌ಹಾಕಿ, ಕೊಟ್ಟಣದ ಅಕ್ಕಿಚೀಲ ಒಂದಕ್ಕೆ ಆರಾಣೆ ರಿಬೇಟ್ ಕೊಡಿ. ಆಗ, ಅದರಬೆಲೆ ಆರಾಣೆ ಏರುತ್ತೆ; ಇದರಬೆಲೆ ಆರಾಣೆ ಇಳಿಯುತ್ತೆ. ಸಮಸ್ಯೆ ಪರಿಹಾರವಾಯಿತು, ಎಂದಿದಾರೆ.

ಇನ್ನು ಗಾಣದವರ ಗೋಳು ಕಾದಿದೆ. ಅವರೂ ಗಲಾಟೆ ಎಬ್ಬಿಸಿದರೆ, ಅದರ ಬಗ್ಗೆಯೂ ಒಂದು ಸಮಿತಿ ರಚನೆಯಾಗಿ, ಅವರು ಊರೂರು ಸುತ್ತಿ, ವರದಿ ಒಪ್ಪಿಸುತ್ತಾರೆ. ಆಯಿಲ್ ಮಿಲ್ಲುಗಳಿಗೆ ಸೆಸ್; ಗಾಣಗಳಿಗೆ ರಿಬೇಟ್....ಒಟ್ಟಿನಲ್ಲಿ, ಕೊಂಡು ತಿನ್ನುವವನಿಗೆ ತಾಪತ್ರಯ....

ಆಮೇಲೆ ಚಮ್ಮಾರರು? ಅವರ ಸಂಕಟ ಪರಿಸ್ಥಿತಿಯನ್ನು ಪರಿಹರಿಸಬೇಡವೆ? ಕಮಿಟಿಮಾಡಿ ಒಂದೆರಡುಲಕ್ಷ ಖರ್ಚುಮಾಡಿದರೆ, ಆಗ ತಿಳಿಯುತ್ತದೆ, ಪರಿಹಾರ ಮಾರ್ಗ....ಮೆಷೀನ್ ಚಪ್ಪಲಿಗಳಿಗೆ ಸೆಸ್ಸು, ನಾಡು ಚಪ್ಪಲಿಗಳಿಗೆ ರಿಬೇಟ್.... ಸೆಸ್ಸು ಸಾಲದೆ ಹೋದರೆ, ಸರ್ಕಾರವೇ ಚಪ್ಪಲಿ ಜೊತೆಗೆ ಇಷ್ಟು, ಅಂತ ಧನ ಸಹಾಯಮಾಡಲಿ, ಬೇಡ ಎನುವವರು ಯಾರು?

ಕೈಹೊಲಿಗೆಯವರು ಸೂಯಿಂಗ್ ಮೆಷೀನ್ ಕೆಲಸಗಾರರಮೇಲೆ ಸೆಸ್‌ಹಾಕಿ, ರಿಬೇಟ್ ಪಡೆಯಬಹುದು. ಸಿಗರೇಟಿನಮೇಲೆ ಸೆಸ್‌ಹಾಕಿ. ಬೀಡಿಗಳನ್ನ ಅಗ್ಗ ಮಾಡಬಹುದು. ಪಾಸಾದ ಹುಡುಗರಮೇಲೆ ಸೆಸ್‌ಹಾಕಿ, ಆ ಹಣದಿಂದ ಫೆಯಿಲಾದ ಹುಡುಗರಿಗೆ ಟ್ಯೂಷನ್ ಹೇಳಿಸಬಹುದು. ಉಲ್ಲನ್ ಬಟ್ಟೆಮೇಲೆ ಸೆಸ್‌ಹಾಕಿ, ಕಂಬಳಿಗಳಿಗೆ ಹಂಚಬಹುದು; ಅಲೋಪತಿ ಔಷಧಗಳಿಗೆ ಸೆಸ್‌ಹಾಕಿ, ಆಸವಗಳಿಗೆ ರಿಬೇಟ್ ಕೊಡಬಹುದು; ಇಂಗ್ಲೀಷ್ ಸಿನಿಮಗಳಿಗೆ ಸೆಸ್‌ಎಳೆದು ಕನ್ನಡ ಸಿನಿಮ ತಾರೆಯರಿಗೆ ಹಂಚಿ ಅವರ ಬಡತನವನ್ನು ನೀಗಿಸಬಹುದು; ಭಾರಿ ಭಾರಿ ಸಂಗೀತ ವಿದ್ವಾಂಸರಿಗೆ ಸೆಸ್‌ಹಾಕಿ (ಕಮಿಟಿ ವರದಿಯಾದನಂತರ) ಯಃಕಶ್ಚಿತ್ ಗಾಯಕರಿಗೆ ಮಾಸಾಶನ ಕೊಡಬಹುದು. ದೊಡ್ಡ ದೇವರಿಗೆ ನಾಮ ಹಾಕಿ, ಎಲ್ಲ ದೇವರುಗಳಿಗೂ ಎಣ್ಣೆ ನೀರು ಕಾಣಿಸಬಹುದು.

ಬಹುದು, ಏನು? ಬೇಕು.

—ಕಾಮತ್.

ಸತ್ಯವಾಗಿ ಹೇಳು!

ನಾನು ರಾಜ ಚಂದಿ "ತಾಜ್‌ಮಹಲ್"ಗೆ ನುಗ್ಗಿ, ಬೆಣ್ಣೆ ಮಸಾಲೆ ತಿಂದು, ಮಾಣಿ ತಂದುಕೊಟ್ಟ ಕಾಗದದ ಚೂರಲ್ಲಿ ಕೈಯಲ್ಲಿದ್ದ ವನಸ್ಪತಿ ಒರಸಿಕೊಳ್ಳುತ್ತಿದ್ದೆವು

"ಲ್ರೋ – ಇಲ್ಲಿ ನೋಡ್ರೋ ಈ ಜಾಹಿರಾತ್ನ!" ಅನ್ನುತ್ತ ರಾಜ ತನ್ನ ಕೈಲಿದ್ದ "ಮಾತೃಲೋಕ"ದ ಚೂರನ್ನ ನನ್ನ ಕೈಗೆ ಕೊಟ್ಟ—

"ಬೇಕಾಗಿದ್ದಾರೆ – ಮಾಧ್ಯಮಿಕಶಾಲೆಗೆ ಅಧ್ಯಾಪಕರು — ಎಲ್ಲಾ ವಿಷಯಗಳಿಗೂ ಮುಖ್ಯೋಪಾಧ್ಯಾಯರನ್ನು ಭೇಟಿಮಾಡಿ–ಮಾಧ್ಯಮಿಕಶಾಲೆ–ಶಿರೂರು"

—ಎಂದಿತ್ತು.

ಶಿರೂರು ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿಮಾಡಹೋದೆವು. ನರಹರಿರಾಯರೇ ನಮ್ಮನ್ನು ಸ್ವಾಗತಿಸಿದರು — ಅವರೇ ಮುಖ್ಯೋಪಾಧ್ಯಾಯರು. ಅವರಿಗೂ ನನಗೂ ನಡೆದ ಭೇಟಿ ಇದು :—

"ನಮಸ್ತೆ – ನಿಮ್ಮ ಜಹಿರಾತನ್ನ ಓದಿದೆವು – ಅದಕ್ಕೇ ಬಂದೆವು"

"ನಮಸ್ತೆ – ಹೌದು, ನಮ್ಮ ಶಾಲೆಗೆ ಮೂವರು ಅಧ್ಯಾಪಕರು ಬೇಕಾಗಿದ್ದಾರೆ. ನಿಮಗೆ ಇಷ್ಟವಿದ್ದರೆ...."

"ಇದೆ – ಅದಕ್ಕೇ ಬಂದೆವು"

"ಅನುಭವ?"

"ಇಲ್ಲ – ಭರವಸೆ ಇದೆ"

"ಅಂದರೆ?"

"ನಾವು ಪಾಠ ಹೇಳಬೇಕಾದ ಹುಡುಗರಿಗಿಂತ ಹೆಚ್ಚು ವಿಷಯ ತಿಳಿದುಕೊಂಡಿದ್ದೇವೆಂದು ನಾವು ತಿಳಿದುಕೊಂಡಿದ್ದೇವೆ"

"ನಿಮಗೆ ಹೊಲ, ಗದ್ದೆ, ತೋಟ – ಇವುಗಳ ವ್ಯತ್ಯಾಸ ಗೊತ್ತೋ?"

[ನನ್ನ ಸೋದರಳಿಯ ಮೊನ್ನೆ ವೈದ್ಯನಾಗ ಬಯಸಿ, ವೈದ್ಯಕೀಯ ಶಾಲೆಯಲ್ಲಿ ಸೀಟಿನ ಬೇಟೆಯ ಭೇಟಿಯಲ್ಲಿ ಇದೇ ಪ್ರಶ್ನೆ ಕೇಳಿದ್ದರಂತೆ]

"ಗೊತ್ತು"

" ಎತ್ತಿಗೂ ಕೋಣಕ್ಕೂ ? "

[ನನ್ನ ಸೋದರಳಿಯ ಇಂಜಿನಿಯರಾಗಬೇಕೆಂದು ಬಯಸಿ, ಇಂಜಿನಿಯರಿಂಗ್ ಶಾಲೆಯಲ್ಲಿ ಸೀಟಿನ ಬೇಟೆಯ ಭೇಟಿಯಲ್ಲಿ ಇದೇ ಪ್ರಶ್ನೆ ಕೇಳಿದ್ದರಂತೆ]

" ಗೊತ್ತು "

" ಆಡಿಗೂ ಕುರಿಗೂ ? "

[ನನ್ನ ಸೋದರಳಿಯ ನ್ಯಾಯಾಧೀಶನಾಗ ಬಯಸಿ, ನ್ಯಾಯ-ಶಾಲೆಯಲ್ಲಿ ಸೀಟಿನ ಬೇಟೆಯ ಭೇಟಿಯಲ್ಲಿ ಇದೇ ಪ್ರಶ್ನೆ ಕೇಳಿದ್ದರಂತೆ]

" ಗೊತ್ತು "

" ನೇಗಿಲಿಗೂ ನೊಗಕ್ಕೂ ? "

[ನನ್ನ ಸೋದರಳಿಯ ಉಪಾಧ್ಯಾಯನಾಗ ಬಯಸಿ ಅಧ್ಯಾಪಕ-ಶಾಲೆಯಲ್ಲಿ ಸೀಟಿನ ಬೇಟೆಯ ಭೇಟಿಯಲ್ಲಿ ಇದೇ ಪ್ರಶ್ನೆ ಕೇಳಿದ್ದರಂತೆ.

" ಗೊತ್ತು "

" ಗೊಬ್ಬರಕ್ಕೂ ಸಗಣಿಗೂ ? "

[ನನ್ನ ಸೋದರಳಿಯ ಏರ್‌ಕ್ರಾಫ್ಟಿನಲ್ಲಿ ಕೆಲಸಕ್ಕೆ ಸೇರಬಯಸಿ, ಅಲ್ಲಿಯ ಭೇಟಿಯಲ್ಲಿ ಇದೇ ಪ್ರಶ್ನೆ ಕೇಳಿದ್ದರಂತೆ]

" ಗೊತ್ತು "

" ಹಾಗಿದ್ದರೆ ನೀವು ನಮ್ಮ ಶಾಲೆಯಲ್ಲಿ ವಿದ್ಯಾದಾನ ಮಾಡಬಹುದು "

ನಾನು, ನನ್ನ ಮತ್ತು ರಾಜ, ಚಂದಿಯ ಪರವಾಗಿಯೂ ಮಾತನಾಡಿದ್ದರಿಂದ ಭೇಟಿ ಮುಕ್ತಾಯವಾಯ್ತು.

* * *

ನಾನು, ರಾಜ, ಚಂದಿ ಮಾಧ್ಯಮಿಕಶಾಲೆಯ ಅಧ್ಯಾಪಕರು. ನಮ್ಮದು ದೊಡ್ಡ ಶಾಲೆ – ನೂರೈವತ್ತು ಬಾಲಕರಿದ್ದಾರೆ. ಹದಿನೈದುಜನ ಅಧ್ಯಾಪಕರಿದ್ದೇವೆ – ಐದುಜನ ಸಂಬಳದವರು, ಹತ್ತುಜನ ವಿದ್ಯಾದಾನಿಗಳು. ನಮ್ಮ ಶಾಲೆಗೆ ಮೂರು ಎಕರೆ ಹೊಲ, ಎರಡೂವರೆ ಎಕರೆ ಗದ್ದೆ, ಎರಡೂವರೆ ಎಕರೆ ತೋಟ, ಒಂದು ಜೊತೆ ಎತ್ತು, ಐದು ಹಸುಗಳು, ಮೂರು ಮೇಕೆ, ಮೂರು ಕುರಿ, ಆರು ನೇಗಿಲು, ಒಂದು ಗಾಡಿ, ಒಂಭತ್ತು ಕೋಳಿ, ಎರಡು ಹುಂಜ, ಒಂದು ಕೋಣ, ಒಂದು ಕೋಣನ ಮಣಕ – ಇಷ್ಟು ಸಂಪತ್ತಿವೆ.

ನಾವು ಶಾಲೆಗೆ ಅಧ್ಯಾಪಕರಾಗಿ ಸೇರಿದಮೇಲೆ – ಮೊದಲನೆಯ ವಾರವೆಲ್ಲಾ ನಮ್ಮ ಶಾಲೆಯ ಸಂಪತ್ತನ್ನು ಉಸ್ತುವಾರಿಗಾಗಿ ಹಂಚಿಕೊಂಡಿದ್ದಾಯಿತು. ಒಬ್ಬೊಬ್ಬ ಅಧ್ಯಾಪಕನಿಗೂ ಹತ್ತುಜನ ಶಿಷ್ಯರು ಸಿಕ್ಕಿದರು.

ಎರಡನೆ ವಾರದಲ್ಲಿ ಕೆಲವು ಬಾಲಕರು ಶಾಲೆಯನ್ನು ಬಿಟ್ಟರು—"ಶಾಲೆಯಲ್ಲಿ ಕಲಿಯುವುದನ್ನು ಮನೆಯಲ್ಲಿ ಮಾಡಿ ಮನೆಯವರಿಗಾದರೂ ನೆರವಾಗುತ್ತೇವೆ" ಅಂದರು.

ಮೂರನೆಯ ವಾರವೆಲ್ಲಾ ಮಿಕ್ಕ ಹೈಕಳನ್ನ ಹಂಚಿಕೊಂಡೆವು.

ನಾಲ್ಕನೆಯ ವಾರದಲ್ಲಿ – ಶಾಲೆಯ ಹುಡುಗರು ಓದು ಬರಹ ಕಲಿಯುವ ಪ್ರಯತ್ನ ಮಾಡಬೇಕು – ಅಂತ ಊರಿನ ಹಿರಿಯರು ಮುಷ್ಕರ ಹಿಡಿದರು. ಅವರನ್ನು ಸಮಾಧಾನಮಾಡಿ, ಹಾಗೆಯೇ ನಿರ್ಧರಿಸಿ, ಶಾಲೆಯಲ್ಲಿ ಅದಕ್ಕಾಗಿ "ಅಕ್ಷರ ಸಮಿತಿ" ಯನ್ನು ನಿರ್ಮಿಸಿದೆವು.

ಐದು, ಆರು, ಏಳನೇ ವಾರಗಳಲ್ಲಿ ಶಿರೂರಲ್ಲಿ ವಿದ್ಯಾದಾನ, ಭೂದಾನ, ವನ ಮಹೋತ್ಸವ, ಅರಣ್ಯ ಪುನರೋದ್ಧಾರ ಮತ್ತು – ಮರೆತೀರಿ! – ಸಂಸ್ಕೃತಿ ಪ್ರಸಾರ – ಇವುಗಳ ಚಳುವಳಿ ಪ್ರಯುಕ್ತ ಬಹಿರಂಗ ಸಭೆಗಳ ಏರ್ಪಾಡಿನಲ್ಲಿ ಕಳೆದೆವು.

ಎಂಟನೆಯವಾರ ಶಾಲೆಯ ತರಗತಿಗಳನ್ನು ನಡೆಸಲು ಪ್ರಾರಂಭ ಮಾಡಿ, ಶಾಲೆಯಿಂದ ಗದ್ದೆಗೂ, ಗದ್ದೆಯಿಂದ ತೋಟಕ್ಕೂ, ತೋಟದಿಂದ ದನದ ಕೊಟ್ಟಿಗೆಗೂ ಅಲ್ಲಿಂದ ಕೋಳಿಗೂಡಿಗೂ, ಕೋಳಿಗೂಡಿಂದ ಹೊಲಕ್ಕೂ–ಬಾಲಕರನ್ನು ಹುಡುಕುತ್ತ ನಾವೂ, ನಮ್ಮನ್ನು ಹುಡುಕುತ್ತ ಬಾಲಕರೂ ಅಲೆದಿದ್ದಾಯಿತು.

ಒಂಭತ್ತನೆಯ ವಾರದಲ್ಲಿ ಒಂದು ಹಸುವಿಗೆ ಪ್ರಸವವೇದನೆ ಶುರುವಾಯ್ತು. ಊರಿನವರ್ಯಾರೂ ಸಹಕರಿಸಲಿಲ್ಲ. ಪ್ರತಿಯೊಂದು ಶಾಲೆಗೂ ಒಬ್ಬರು ಪ್ರಾಣಿ ವೈದ್ಯರು ಇರಬೇಕು ಇಲ್ಲವೇ ಒಬ್ಬ ಸೂಲಸ್ತ್ರೀಯಾದರೂ ಬೇಕೇ ಬೇಕೆಂದು ಮಂದಟ್ಟಾಯಿತು. ಅಂತೂ ದೈವಸಹಾಯ – ನಮ್ಮೆಲ್ಲರ ಮೆಹನತ್ತಿದ್ದರೂ ಮೂಕಪ್ರಾಣಿಗೆ ವಾರದ ಕೊನೆಯಲ್ಲಿ ಸುಖ ಪ್ರಸವವಾಯ್ತು. ನಮಗೂ ಮನಸ್ಸು ನೆಮ್ಮದಿಯಾಯ್ತು.

ಹತ್ತನೆಯ ವಾರದಲ್ಲಿ ಚಂದಿಯ ಗುಂಪಿನಲ್ಲಿ ಗುಲ್ಲೆಬ್ಬಿತು. ಚಂದಿಗೆ ಕೋಳಿ ಗೂಡಿನ ಜವಾಬ್ದಾರಿ. ಅವನ ಪಟಾಲಂನಲ್ಲಿ ಯಾರೋ ಮೊಟ್ಟೆಗಳನ್ನು ಹಾರಿಸಿದ ರಂತೆ ಮತ್ತು ಒಂದು ಕೋಳಿ ಗೈರುಹಾಜರು. ಇವೆಲ್ಲಕ್ಕೂ ಟಿಪ್ಪು ಎಂಬ ಹುಡುಗನೇ ಕಾರಣ, ಎಂದು ಕೆಲವರ ಅಭಿಪ್ರಾಯ. ಟಿಪ್ಪುವಿಗೆ ಬರುಬರುತ್ತ ಬೊಜ್ಜು ಬರುತ್ತಿದ್ದುದರಿಂದ ಚಂದೀಗೂ ಅವನಮೇಲೇ ಅನುಮಾನ. ಅದಕ್ಕಾಗಿ ಒಂದು "ಕೋಳಿ–ಮೊಟ್ಟೆ ಸಮಿತಿ" ರಚಿಸಿದೆವು.

ಹನ್ನೊಂದನೆಯ ವಾರದಲ್ಲಿ ನಮ್ಮ ಶಾಲೆಗೆ ಒಂದು ದೊಡ್ಡ ಸಮಸ್ಯೆ ಉದ್ಭವಿಸಿತು. ನಮ್ಮ ಶಾಲೆಯ ಜಮೀನಿನ ಮೂಲ ಒಕ್ಕಲುಗಳು ಒಳಗೊಳಗೇ ಕೋರ್ಟಿನಲ್ಲಿ ಶಾಲೆಯಮೇಲೆ ಕೇಸು ಹಾಕಿದರು. ನಮಗೆಲ್ಲಾ ಕೋರ್ಟಿಗೆ ಹಾಜರಾಗಿರೆಂದು ವಾರಂಟು ತರಿಸಿದರು. ಪ್ರತಿ ಶಾಲೆಗೂ ಒಬ್ಬರು ವಕೀಲರು ಇರಬೇಕೆಂದು ಮಂದ ಟ್ಟಾಯಿತು.

ಇತ್ತ ದನದ ದೊಡ್ಡಿಯಲ್ಲಿ ಗಲಾಟೆ ಶುರುವಾಯ್ತು. ಇದ್ದಕ್ಕಿದ್ದ ಹಾಗೆ ಕೋಣಕ್ಕೂ ಕೋಣನ ಮಣಕಕ್ಕೂ ಮಾರಾಮಾರಿ ಎದ್ದಿತು. ಅವೆರಡೂ ನನ್ನ ಪಾಲಿಗೆ ಬಂದವು – ನಾನು ಅವೆರಡರ ಮಧ್ಯೆ ಶಾಂತಿಧೂತನಾಗಿ ಹೋದೆ. ನಮ್ಮ ಮನೆಯಲ್ಲಿ ನಮ್ಮ ನಮ್ಮಲ್ಲಿ ಜಗಳ ಶುರುವಾದಾಗ, ನಮ್ಮ ಜಾನಕತ್ತೆಯುವರನ್ನು ಕರೆಸುತ್ತೇವೆ. ಜಾನಕತ್ತೆಯುವರೊಬ್ಬರನ್ನು ಎದುರಿಸುವುದಕ್ಕೋಸ್ಕರ ನಾವೆಲ್ಲಾ ನಮ್ಮ ಮನಸ್ತಾಪ ಬಿಟ್ಟು ಒಂದಾಗುತ್ತೇವೆ. ಅದೇರೀತಿ ಈಗ, ನಾನು ಹತ್ತಿರ ಹೋದೊಡನೆಯೇ ಕೋಣ_ಮಣಕ ಎರಡೂ ರಾಜಿಮಾಡಿಕೊಂಡು ನನ್ನ ಮೇಲೆ ಬಿದ್ದುವು. ನಾನು ತಪ್ಪಿಸಿಕೊಂಡು ಓಡಿದೆ- ಅಟ್ಟಿಸಿಕೊಂಡು ಬಂದುವು. ಸುಸ್ತಾಗಿ ನೆಲಕ್ಕೆ ಬಿದ್ದೆ. ಕೋಣವು ನನ್ನ ಹೊಟ್ಟೆಗೂ, ಮಣಕವು ನನ್ನ ಎದೆಗೂ ತಮ್ಮ ಕೋಡುಗಳಿಂದ ತಿವಿಯುತ್ತ—

"ಅಯ್ಯೋ!!" ಅನ್ನುತ್ತ ಅರಚಿದ ಜ್ಞಾಪಕ. ಕಗ್ಗತ್ತಲು. ರಾಜ ಚಂದಿ ಇಬ್ಬರೂ—

"ಏನೋ ಅದು ನಿಶಿರಾತ್ರೀಲೂ ನಿನ್ನ ಗೋಳು!?" ಅನ್ನುತ್ತ ಟಾರ್ಚುಹಾಕಿ ನನ್ನ ಮೈಮೇಲೆ ಬಿದ್ದಿದ್ದ ಶಿರೂರು ಮುಸಾಫಿರ್ ಖಾನೆಯ ಮುರುಕಲು ಕುರ್ಚಿಯನ್ನು ಎತ್ತಿಟ್ಟರು.

"ಈ ಕನಸೆಲ್ಲಾ ನೀ ತಿಂದ ಆ ಉದ್ದಿನೊಡೆಯ ಪರಿಣಾಮ" ಅಂದ ರಾಜ.

"ನಾ ಬೇಡಾಂದ್ರೂ ಹಠಹಿಡಿದು ಅದನ್ನೇ ತಿಂದಿದ್ದರ ಪರಿಣಾಮ" ಅಂದ ಚಂದಿ – ಹುಣ್ಣಿನಲ್ಲಿ ಚಾಕು ತಿರುವುತ್ತಾ.

ಪುನಹ ನಾನೆಷ್ಟು ಪ್ರಯತ್ನಪಟ್ಟರೂ, ನಮ್ಮ ಅಧ್ಯಾಪಕತ್ವದ ಮಿಕ್ಕ ದೃಶ್ಯಗಳ ಕನಸು ಬೀಳಲಿಲ್ಲ.

* * *

ಮರುದಿನ ಬೆಳಿಗ್ಗೆ, ನರಹರಿರಾಯರಿಗೂ, ಅನಂತಮೂರ್ತಿಯವರಿಗೂ ವಂದಿಸಿ ಶಿರೂರು ಬಿಟ್ಟೆವು. ನಾನು ಸೈಕಲ್ ತುಳಿಯುವಾಗ ಹರಟೆ ಹೊಡೆಯುವ ಅಭ್ಯಾಸ ವಿಲ್ಲ. ನನ್ನ ವೈದ್ಯರು ಹಿಂದೆ ಹೇಳಿದ್ದರು — "ಸೈಕಲ್ ತುಳಿಯುವಾಗ ಜಾಸ್ತಿ ಮಾತನಾಡಿದಷ್ಟೂ ಬೇಗ ಸುಸ್ತಾಗುತ್ತದೆ ಆದಷ್ಟೂ ದೀರ್ಘವಾಗಿ ಮೂಗಿನಿಂದಲೇ ಉಸಿರಾಡುತ್ತ ಸೈಕಲ್ ತುಳಿಯಬೇಕು" – ಅಂತ. ನಾನು ಮುಂದೆ. ನನ್ನ ಹಿಂದೆ ಐವತ್ತು ಗಜ ದೂರದಲ್ಲಿ ರಾಜ ಚಂದಿ – ಇದೇ ನಮ್ಮ ಸಂಪ್ರದಾಯ. ಶಿರೂರು ಬಿಟ್ಟು ಎರಡನೇ ಮೈಲಿಕಲ್ಲು ದಾಟಿದ್ದೇವೆ – ನನ್ನೆದುರಿನಿಂದ ಮತ್ತೊಬ್ಬ ವ್ಯಕ್ತಿ ಸೈಕಲ್ ತುಳಿದು ಬರುತ್ತಿದ್ದ. ಆತ ತನ್ನ ಸೈಕಲ್‌ನ ಡ್ರೈವರ್ ಸೀಟು ಬಿಟ್ಟು ಮಿಕ್ಕೆಲ್ಲಾ ಭಾಗಗಳಿಂದಲೂ ಡಬ್ಬಗಳನ್ನು ತೂಗುಬಿಟ್ಟಿದ್ದ – ಪ್ರಾಯಶಃ ಹಾಲಿನವ ನಿರಬೇಕೆಂದುಕೊಂಡೆ. ಆತ ನನ್ನ ಹತ್ತಿರಕ್ಕೆ ಬಂದೊಡನೆ

"ಸರ್ – ಟೈಮ್ ಎಷ್ಟು ಸರ್ ?" ಅಂದ. ನನ್ನ ಮೌನವ್ರತ ಮುರಿಯುವುದರಲ್ಲಿತ್ತು. ತಕ್ಷಣ ಹತೋಟಿಗೆ ತಂದು, ನನ್ನ ಬಲಗೈಯಿಂದ ನನ್ನ ಹಿಂದಿದ್ದವರ ಕಡೆ ಕೈಸನ್ನೆ ಮಾಡಿದೆ. ಇದಾದ ಎರಡನೇ ನಿಮಿಷವೇ ನನ್ನ ಹಿಂದೆ ಹೈಡ್ರೋಜನ್ ಬಾಂಬ್ ಆಸ್ಫೋಟನೆಯಾಯ್ತು ! ಇಳಿದು ತಿರುಗಿದೆ.

ನಾನು ಚಿತ್ರಗಾರನಾಗಿದ್ದರೆ ನಾನು ನೋಡಿದ ದೃಶ್ಯವನ್ನು ತೋರಿಸುತ್ತಿದ್ದೆ. ಆ ಪುಣ್ಯ ನಿಮಗಿಲ್ಲ. ಬರಹದಲ್ಲಿ ಎಷ್ಟು ಬರೆದರೂ ಆ ಘಟನೆಯ ನಿಜರೂಪ ನಿಮಗೆ ಸಿಗದು. ನೀವು ಗುಜರಿ ನೋಡಿದ್ದೀರಲ್ಲವೆ? ಕಳೆದ ಯುದ್ಧದಲ್ಲಿ ಹಿಟ್ಲರ್ ಸಾಯುಕ್ಕೆ ಮುಂಚೆ, ಜರ್ಮನೀಲಿ ಬಿದ್ದಿದ್ದ ಕಬ್ಬಿಣದ ಕಳೇಬರವನ್ನೆಲ್ಲಾ ನಮ್ಮ ಗುಜರೀಗೇ ರವಾನಿಸಿದ್ದ. ಅದೇ ಗುಜರಿ, ತಥಾ ಗುಜರಿ ಮಾಲೀಕರು – ಮಸ್ತಾನ್ ಖಾನ್ ಬಂಧುಗಳು – ಒಟ್ಟಿಗೆ ಒಂದುವೇಳೆ ಕ್ಷೀರಾಬ್ಧಿಯಲ್ಲಿ ಝುಂಡಾ ಹಾಕಿದರೆ ಹೇಗಿರುತ್ತೆ? — ಹಾಗಿತ್ತು ದೃಶ್ಯ! ಬಿಟ್ಟಬಾಯಿ, ನೆಟ್ಟಗಣ್ಣು – ನೋಡುತ್ತ ನಿಂತೆ.

"ಲೋ, ಏನೋ ದೆವ್ವ ಬಡಿದ ಗೂಬೇಹಾಗೆ ನಿಂತಿದ್ದಿ?" – ಚಂದಿಯ ಈ ಮಾತು ನನ್ನನ್ನೆಚ್ಚರಿಸಿತು.

ರಾಜ, ಚಂದಿ ಮತ್ತು ಹಾಲಿನ ವ್ಯಕ್ತಿ, ನನ್ನ ಮುಂದೆ–"ಆಲಿನ ಸೌಂದ್ರದ ಮಧ್ಯ" ಗೋಚರವಾದರು.

ನಾನು ಇದುವರಿವಿಗೆ ಎಷ್ಟೋ ಇಂತಹ ಡಿಕ್ಕಿ ಘಟನೆಗಳಲ್ಲಿ ಸಿಕ್ಕಿಬಿದ್ದಿದ್ದೇನೆ. ನನ್ನ ಅನುಭವ – ಜಗಳ ಶುರುವಾಗುವುದಕ್ಕೆ ಮುಂಚೆ ಎದುರು ಆಸಾಮಿಯಮೇಲೆ ತಪ್ಪುಹೊರಸುವುದು ! ಇದೇ ಧ್ಯೇಯವಿಟ್ಟು ಅಖಾಡಕ್ಕೆ ಇಳಿದೆ.

"ಏನಯ್ಯಾ – ನೀನೆಷ್ಟು ದಿನದಿಂದ ಸೈಕಲ್ ಸವಾರಿಮಾಡುತ್ತಿದ್ದಿ" ಅಂದೆ.

ಆತ ತಲೆಯೆತ್ತಿದ.

"ಸತ್ಯವಾಗಿ ಹೇಳು!" ಅಂತ ಸೇರಿಸಿದೆ – ಬಿರುಸಾಗಿ. ನಾನು ಹಿಂದೊಂದು ಸಾರಿ ಬೆಂಗಳೂರು ಚಿಕ್ಕಪೇಟೆಯಲ್ಲಿ ಕಾನೂನಿಗೆದುರಾಗಿ ಸೈಕಲ್ ಸವಾರಿಮಾಡುತ್ತಿದ್ದಾಗ ತಾಫೆ ಜಾನಕಿ ಗಲ್ಲಿ ಹತ್ತಿರ ಪೋಲೀಸಿನವರ ಕೈಗೆ ಸಿಕ್ಕಿಹಾಕಿಕೊಂಡಿದ್ದೆ. ಆ ಸಂದರ್ಭದಲ್ಲಿ ಕೋರ್ಟಿಗೆ ಹೋಗಬೇಕಾಯಿತು. ಅಲ್ಲಿ ನ್ಯಾಯಾಧೀಶರು ನನಗೆ

"ಸತ್ಯವಾಗಿ ಹೇಳಿ!" ಅಂದಿದ್ದರು–ಬಿರುಸಾಗಿ. ಆಗ ನನಗೆ ಅವರ ಆ ಆರು ಅಕ್ಷರದ ಮಾತು ಬಹಳ ರಸವತ್ತಾಗಿ ತೋರಿತು. ನ್ಯಾಯಾಧೀಶರು ಅದೇ ಬಿರುಸಿನಲ್ಲಿ ಅದೇ ಸವಾಲನ್ನು ಸಾಕ್ಷಾತ್ ಹರಿಶ್ಚಂದ್ರನಿಗೇ ಹಾಕಿದ್ದರೂ — ಹರಿಶ್ಚಂದ್ರ ತಡವರಿಸುತ್ತಿದ್ದ.

"ಸತ್ಯವಾಗಿ ಹೇಳು!!" ಅಂದೆ – ಮತ್ತೂ ಬಿರುಸಾಗಿ.

“ಏನ್ರೀ ಅದು ಸತ್ಯ ಅಂದರೆ?” ಅನ್ನುತ್ತ ಎದ್ದ–ಆ ವ್ಯಕ್ತಿ. ನಾನು ಹಿಂದಕ್ಕೆ ಸರಿದೆ. ನಿಜ–ಹಾಲಿನವರಿಗೆ ಸತ್ಯ ಅಂದರೆ ಏನು ಗೊತ್ತು? ಆದರೂ–ಅಂದು ನ್ಯಾಯಾಧೀಶರಿಗೆ ನಾನು ಈ ಪ್ರತಿ ಸವಾಲು ಹಾಕಿರಲಿಲ್ಲ.

“ಏನೋ ಸತ್ಯ ಅಂತೆ ಸತ್ಯ! ಇವರೇ ಸತ್ಯ ಕಂಡುಹಿಡಿದಂಗೆ! ನನ್ನಷ್ಟಕ್ಕೆ ನಾನು ದೇವರೇ ಅಂತ ಬರ್ತಾ ಇದ್ರೆ–ನಿಮ್ಮನ್ನ ಟೈಮ್ ಕೇಳಿದ್ದೇ ತಪ್ಪೇ?” ಅಂತ ಮತ್ತೆ ವದರಿದ.

ರಾಜ ಚಂದಿ ಎದ್ದರು.

“ಇಗೋ ನೋಡಿ–ಈ ಇಬ್ಬರನ್ನ ವಿಚಾರಿಸಿ. ನಿಮ್ಮನ್ನ ಕೇಳಿದಹಾಗೆ ಅವರನ್ನೂ ಟೈಮ್ ಕೇಳಿದೆ–ಅದೇನು ಆವೇಶ ಬಂತೋ–ರೇಗಿದ ಗೂಳಿಗಳಹಾಗೆ ನನ್ನಮೇಲೆ ಬಿದ್ದರು. ಅವರನ್ನ ಕೇಳಿ-ಸೈಕಲ್ ಸವಾರಿಮಾಡ್ತಾರೋ–ಏರೋಪ್ಲೇನೊ ಅಂತ. ರಸ್ತೆಮೇಲೆ ಹೋಗ್ತಾರೋ––ಫಾಳೀಲೇ ಹೋಗ್ತಾರೋಂತಾ” ಅಂದ.

ಶ್ವಾಸ ಸರಿಪಡಿಸಿಕೊಂಡ.

“ಸತ್ಯ ಅಂತೆ ಸತ್ಯ!” ಅಂದ—ಮರುಕಳಿಸಿ.

ನನಗೆ ಯಾವುದೂ ತೋಚಲಿಲ್ಲ.

“ಅಯ್ಯಾ ತಪ್ಪಾಯ್ತು ಕ್ಷಮಿಸಯ್ಯಾ” ಅಂದೆ.

“ತಪ್ಪು ಕ್ಷಮಿಸೋದಿರ್ಲಿ ಸ್ವಾಮೀ—ಈಗ ಇಲ್ಲಿ ನನಗಾಗಿರೊ ನಷ್ಟಾನೆಲ್ಲಾ ಇಲ್ಲೇ ಸೆಟಲ್‌ಮಾಡಿ ಕಟ್ಟಿಕೊಡೋತನಕ ಒಂದಡಿ ಮುಂದಕ್ಕೆ ಹೋಗೋಕೆ ಬಿಡೊಲ್ಲ—ಆ ಇಬ್ರನ್ನ” ಅಂದ.

ನನಗೆ ಈ ಅಂಶ ಮನಸ್ಸಿಗೆ ಹೊಳೆದಿರಲಿಲ್ಲ. ವೃಥಾ ಆತನನ್ನು ನಿಂದಿಸಿದ್ದಕ್ಕಾಗಿ ನನಗೆ ವ್ಯಥೆಯಾಯ್ತು. ಅಷ್ಟುಹೊತ್ತಿಗೆ ರಾಜ ಚಂದಿ ಇಬ್ಬರೂ ಚೇತರಿಸಿಕೊಂಡಿದ್ದರು. ಮುಂದಿನ ಕಾರ್ಯಕ್ರಮ ಅವರವರಿಗೆ ಬಿಟ್ಟು ನಾನು ನನ್ನ ಕಿವಿಗಳನ್ನು ಅರಳಿಸಿ ನಿಂತೆ.

ಚಂದಿ:—“ಏನಯ್ಯಾ ಅದು ನಿನ್ನ ಪುರಾಣ?”

ರಾಜ:—“ಹೂ—ಏನದು ನಿನ್ನ ಪುರಾಣ?”

ಆತ:—“ನಿಮಗೆ ಕಿವಿ ಇಲ್ವೇ—ಅವರತ್ರ ಹೇಳಲಿಲ್ವೇ ಇಷ್ಟುಹೊತ್ತೂ?”

ರಾಜ:—“ಅದು ಕೇಳಿದ್ದಾಯ್ತು—ಅದೇನೋ ಗೂಳಿ—ಏರೋಪ್ಲೇನೂ ಅಂದ್ಯೆಲ್ಲಾ—ಏನದು?”

ಚಂದಿ:—“ಅದೇನು ಹೇಳು—ಗೂಳಿ—ಏರೋಪ್ಲೇನು ಅಂದ್ಯೆಲ್ಲಾ–ಏನದು ಹೇಳು?”

ಆತ:—"ಕೇಳಿ-ಗೂಳಿ ಅಂದ್ರೆ—ನೀವಿಬ್ಬರೂ! ಏರೊಪ್ಲೇನೂ ಅಂದ್ರೆ-ಅಲ್ಲಿ ಬಿದ್ದಿವೆಯಲ್ಲಾ ನಿಮ್ಮ ಬೈಸ್ಕಲ್ಲೂ—ತಿಳೀತೋ?"

ಚಂದಿ:—"ಓಹೋ!"

ರಾಜ:—"ಹಾಗೋ?"

ಆತ:—"ಹೌದು—ಹಾಗಿಲ್ಲದೆ — ನೀವು ಮನುಷ್ರಾಗಿ ರಸ್ತೆಮೇಲೆ ಹೋಗ್ತಿದ್ದೀವಿ ಅಂತ ತಿಳ್ಕೊಂಡಿದ್ರೆ ದೆವ್ವದಂಗೆ ನಾನು ನಿಮ್ಮೆದುರು ಬರ್ತಿದ್ದುದ್ದು ನಿಮ್ಮ ಕಣ್ಣಿಗೆ ಬೀಳ್ತಾ ಇರ್ಲಿಲ್ವೆ?"

ರಾಜ:—"ಹಾಗಾದರೆ ನೀನು ದೆವ್ವ ಅಂತ ಒಪ್ಕೊತ್ತೀಯೊ?"

ಚಂದಿ:—"ವೀರಭದ್ರೂ!!!"

ರಾಜ:—"ಹಾ!!"

ಚಂದಿ:—"ಲೋ—ನೀನು ವೀರಭದ್ರೂ ಅಲ್ಲೇನೋ?—ಲ್ರೋ—ಇವನು ನಮ್ಮ ವೀರಭಧ್ರೂ ಕಾಣ್ರೋ! ಏನೋ ವೀರಭದ್ರು!—ನನ್ನ ಮರೆತುಬಿಟ್ಯಾ? ಇವನು ರಾಜ ಅಲ್ವೆ? – ನಾನು—ಚಂದಿ—ಮರೆತುಬಿಟ್ಯಾ?....

ನನಗೆ—ಎಚ್ಚರವಿದ್ದೇನೋ ಅಥವಾ ಪುನಹ ಕನಸೋ ಅನ್ನುವುದು ತಿಳಿಯಲಿಲ್ಲ. ಚಿವುಟಿಕೊಂಡೆ. ನೋವಾಯ್ತು—ಪುನಹ ಅಖಾಡಕ್ಕೆ ಇಳಿದೆ.

ರಾಜ:—"ಹೌದೋ—ಏನೋ ವೀರಭದ್ರು—ವರ್ಷಾನುಗಟ್ಟಲೆ ನಮ್ಮ-ನಿನ್ನ ಭೇಟಿಯಾಗದೆ—ಈಗ, ಇಲ್ಲಿ, ಈ ರೀತಿ ಬೇಟಿಯಾಗಬೇಕಾಗಿತ್ತೇ?"

ಆತ:—"ಸ್ವಲ್ಪ ತಡೀರಿ—ಸ್ವಲ್ಪ ತಡೀರಿ—ಏನಂದ್ರಿ? ರಾಜ!—ಚಂದಿ!—ಹೌದಲ್ಲಾ! ಅಯ್ಯೋ ದೇವರೇ! ಎಲ್ಲಿದ್ದೀರಿ?--ಏನು ಸಮಾಚಾರ?--ಇವರ್ಯಾರು?

ಚಂದಿ:—"ಇದೇನೋ ಮರೆತುಬಿಟ್ಯಾ?—ನಮ್ಮ ಹಾಫ್‌ಕ್ರ್ಯಾಕು... ಅಯ್ಯೊ ....ಹಾಫ್ ಬ್ಯಾಕು—ಕೇಫ ಅಲ್ವೇ?

ಭೇಟಿ ಬಹಳ ಸ್ವಾರಸ್ಯವಾಗಿ ಜರುಗಿ, ಹಳೆಯ ಸ್ನೇಹದ ಪುನರುದ್ಧಾರವಾಯ್ತು. "ನಂಬಿಕೆಟ್ಟವರಿಲ್ಲವೋ" ದಾಸರಪದ "ಹವ್ಮಿ"ಕೊಂಡೆ.

"ಸರಿ—ನನ್ನ ಹಾಲೆಲ್ಲಾ ಹೋಯ್ತು. ಇನ್ನು ನಾನು ಮನೆಗೇ ಹೋದರಾಯ್ತು. ನೀವೂ ಬನ್ನಿ ನನ್ನ ಮನೆಗೆ" ಅಂದ ವೀರಭದ್ರು.

"ವೀರಭದ್ರು—ನಿಜ ಹೇಳೋ—ಅಷ್ಟು ಡಬ್ಬದಲ್ಲೂ—ಅಂದರೆ—ಒಂದು, ಎರಡು, ಮೂರು, ನಾಕು, ಐದು, ಆರು, ಏಳು, ಎಂಟು, ಒಂಬತ್ತು—ಒಂಬತ್ತು ಡಬ್ಬದಲ್ಲೂ ನೀರು ಜಾತಾ—ಹಾಲಿಸ್ಟಿತ್ತೋ?" ಅಂತ ಕೇಳಿದ ಚಂದಿ.

“ ಸತ್ಯವಾಗಿ ಹೇಳು ” ಅಂದೆ ನಾನು.

“ ಸತ್ಯ!—ಓಹೋ—ನಿಮಲ್ಲೇ ಇರಲಿ—ಈ ಒಂಭತ್ತು ಡಬ್ಬಗಳ ಹಾಲೂ—ನೀರು ಜಾತಾ—ಐದು ಪಾವು ಹಾಲು—ಜೊತೆಗೆ ಒಂದು ಪಾವು ಪುಡಿ” ಅಂದ ವೀರಭದ್ರು.

ಎಲ್ಲರೂ ವೀರಭದ್ರು ಮನೆಗೆ ಹೊರಟೆವು—ತಲಕಾಡಿನ ಹಾದಿಯಲ್ಲೀ.

— “ಕೇಫ”.

—o—

ಸಂಶಯ ನಿವೃತ್ತಿ

ಮಧುಮಾಸ ಮೊದಲಲ್ಲ ಕೋಗಿಲೆಯ ಕೂಗಿಲ್ಲ
ಶ್ರಾವಣದ ಸಂಧ್ಯೆಯಲಿ ಗೂಗೆ ಕೂಗುತಿದೆ
ಚಂದಿರನ ಬೆಳಕಿಲ್ಲ, ಆದರೂ ಕಂದರ್ಪನಂಬು
ಗಳ ಕಾಟವಿದು ಮಿತಿಮೀರಿ ತೇಕೆ?

ಅರಿಯೆಯಾ? ಓ ಗೆಳೆಯ! ಈ ಊರ ಮಧ್ಯದಲಿ
ಕಾಮಾಂತ ಕೇಶ್ವರನ ಗುಡಿಯಿರುವುದೊಂದು
ಅಲ್ಲಿ ವಿಜಿತೇಂದ್ರಿಯ ಸ್ವಾಮಿಗಳು ಪ್ರಭುಲಿಂಗ
ಲೀಲೆಯನು ಬೋಧಿಪರು ಇಂದು ಮೊದಲು

ಅನುಭವಾಮೃತ, ಯೋಗ ವಾಶಿಷ್ಠ, ಮಾಂಡೂಕ್ಯ,
ನಿಶ್ಚಲಾನಂದ ಕೃತ ವೃತ್ತಿ ಪ್ರಭಾಕರ,
ಇದರ ಬೋಧೆಯ ಕೇಳಿ ಕಾಲೇಜು,
ಅಡುಗೆಮನೆ ಎರಡೂ ಕೂಡುತಲಿಹವು
ಅದರಿ ನಿಂತು

—ಅ. ರಾ. ಸೇ

ಸ್ಕ್ರೀನ್!

ಸ್ಕ್ರೀನ್ ಅರ್ಥಾತ್ ಸಿನಿಮಾ ಕೈಗಾರಿಕೆಯೇ ಭಾವಿಭಾರತದ ಲಾರ್ಜ್ ಸ್ಕೇಲ್ ಇಂಡಸ್ಟ್ರಿ. ಚಲನಚಿತ್ರವೇ ಶಿಕ್ಷಣಮಾಧ್ಯಮ. 'ಅಪೇರ,' 'ಭಾರತ್,' 'ಮುರಾರ್ಜಿ,' 'ವೆಂಕಟೇಶ್ವರ' 'ಬಕ್ರ;' 'ಮಂಕಡ್,' '(ಕ್ಯಾಪ್ಟನ್) ಲಕ್ಷ್ಮಿ';

'ಪುಂಗನೂರ್' (ಇತ್ಯಾದಿ ಸಹಸ್ರ....ಶತಸಾಹಸ್ರ!) ಟಾಕೀಸ್‌ಗಳೇ ಕಾಲೇಜುಗಳು ಭಾರತದ ಮುಂದೆ ಹಾಲಿವುಡ್ ಹೇಳ ಹೆಸರಿಲ್ಲದಂತಾಗುತ್ತದೆ (ಭಾರತದ ಫಾರಿನ್ ಪಾಲಿಸಿಯನ್ನು ಟೀಕಿಸುವ ಅಮೇರಿಕಕ್ಕೆ ತಕ್ಕಶಿಕ್ಷೆ.... ಮಣ್‌ಹುಯ್‌ಕೊಳ್ಳಿ!) ಬೀದಿಬೀದಿಗೂ ಎಂಟು ಹತ್ತು ಸಿನಿಮಾ ಥಿಯೆಟರುಗಳಾಗುವುದರಿಂದ ಅವುಕ್ಕೆಲ್ಲ ಚಿತ್ರಗಳನ್ನು ಒದಗಿಸಬೇಕಾಗುತ್ತದೆ. ಕಡೆಗಾದರೂ (ದೇಶಮುಖ್ ಕಣ್ಣಾರೆ ಕಂಡು ಹಿಗ್ಗಿ ದುರ್ಗಾಬಾಯಿ ಬೆನ್ನುಗುದ್ದಲಿ) ನಿರುದ್ಯೋಗ ಸಮಸ್ಯೆ ತೊಲಗಿ ಪ್ರತಿಯೊಬ್ಬರೂ ಸಿನಿಮಾ ಕೈಗಾರಿಕೆಯಲ್ಲಿ ತೊಡಗುತ್ತಾರೆ. ಅರ್ಧಜನ ಡೈರೆಕ್ಟರ್‌ಗಳಾಗುತ್ತಾರೆ. ಇನ್ನರ್ಧಜನ 'ಆಕ್ಟ್' ಮಾಡುತ್ತಾರೆ. ಇದರಲ್ಲಿ ಕಾಲುಭಾಗ ಹಾಡುತ್ತಾರೆ. ಕೆಲವರು ಪರದೆ ಹಿಂದೆ – ಇನ್ನು ಕೆಲವರು ಮುಂದೆ, ಬೇರೆಯವರ ಗಂಟಲುಗಳ ಮೂಲಕ!

ಆದ್ದರಿಂದ ಭಾವೀ ಭಾರತದಲ್ಲಿ ಅಗ್ರಿಕಲ್ಚರ್; ಹಾರ್ಟಿಕಲ್ಚರ್; ಕಲ್ಚರ್ (ಸಿನಿಮಾಗಳ ಮೂಲಕವೇ ಸಂಸ್ಕೃತಿ ಪ್ರಸಾರ ಮಾಡಲಾಗುವುದು: ಉದಾ:— ಅಸ್ಸಾಂ ಗುಡ್ಡಗಾಡುಜನರಿಂದ ನಗ್ನ ನೃತ್ಯ – ಜನಪದ ಸಾಹಿತ್ಯದೊಡನೆ) ಮುಂತಾದುವುಗಳಿಗೆ ಅವಕಾಶವೇ ಇಲ್ಲ! ಜನಗಳಿಗೆ ಬೇಕಾಗುವ ಕೈಗಾರಿಕ ಸಾಮಗ್ರಿಗಳೆಂದರೆ, ಪೌಡರು, ಸ್ನೋ, ಕ್ರೀಮು, ಲಿಪ್‌ಸ್ಟಿಕ್; ಬಣ್ಣ; ಚಪ್ಪಲಿ ವಗೈರೆ ಸಲಕರಣೆಗಳು. ಸಿಮೆಂಟು; ಉಕ್ಕು; ಕಬ್ಬಿಣ ಮುಂತಾದುವೆಲ್ಲ ಅನವಶ್ಯಕ. ಕಬ್ಬಿಣ ಉಕ್ಕಿನ ಕಾರ್ಖಾನೆಗಳಲ್ಲಿ ಚಪ್ಪಲಿಗಳನ್ನು ('ಬಾಟ'ನ ಮುಂದೆ ಟಾಟ (Tata)ನೆ!), ಸಿಮೆಂಟ್ ಫ್ಯಾಕ್ಟರಿಗಳಲ್ಲಿ, ಸ್ನೊ ಮತ್ತು ಕ್ರೀಮುಗಳನ್ನು ತಯಾರಿಸಬೇಕಾಗುತ್ತದೆ. ಹಾಲಿ ಇರುವ ಫ್ಯಾಕ್ಟರಿಗಳು ಏನೇನೂ ಸಾಲದು. ಉದಾಹರಣೆಗೆ ಮುಖಕ್ಕೆ ಲೇಪಿಸಿಕೊಳ್ಳುವ ('ಷಾಲಿಮಾರ್' ಮುಂತಾದವರು ಮುಖಕ್ಕೆ ಬಳಿಯುವ ಪೈಂಟ್‌ಗಳನ್ನು ತಯಾರಿಸುವವರೆಗೆ) ಕ್ರೀಮೊಂದನ್ನೇ ಮೂರುತರ ತಯಾಸರಿಬೇಕಾಗುತ್ತದೆ. ರಾತ್ರಿ ಮಲಗಿಕೊಳ್ಳುವಾಗ ಹಚ್ಚಿಕೊಳ್ಳುವ ಕೋಲ್ಡ್

ಕ್ರೀಮ್ (O°C); ಬೆಳಗ್ಗೆ ಎದ್ದು ಸ್ಟೂಡಿಯೋಗಳಿಗೆ ಹೋಗುವುದಕ್ಕೆ ಮುಂಚೆ ಹಚ್ಚಿಕೊಳ್ಳುವುದಕ್ಕೆ ವ್ಯಾನಿಷಿಂಗ್ ಕ್ರೀಮ್, ಮನೆಯಲ್ಲೇ ಇರುವಾಗ (ಇದ್ದರೆ!) ಹಚ್ಚಿಕೊಳ್ಳಲು ಅಸ್ಟಾನಿಶಿಂಗ್ ಕ್ರೀಮ್ – ಹೀಗೆಯೇ ಇನ್ನೂ ಕೆಲವು ಸ್ಪೆಷಲ್ ಬ್ರ್ಯಾಂಡುಗಳು, ವಿಶೇಷ ಪರಿಸ್ಥಿತಿಗಳಲ್ಲಿ ಅಲಂಕಾರಕ್ಕೆ (ಉದಾ: ಝಣಕ್ ಝಣಣ್ ಪಾಯಲ್ ಬಾಜೆ ಸ್ನೋ)


ಅಟ್‌ಲೀಸ್ಟ್ ಮೂವತ್ತು ಕೋಟಿ ಜನಗಳಾದರೂ 'ಚಲಚ್ಚಿತ್ರ' ಕೈಗಾರಿಕೆ ಯಲ್ಲಿ ತೊಡಗುವುದರಿಂದ, ಅಷ್ಟೊಂದು ಜನಕ್ಕೆ ಕೇವಲ ಸ್ನೋ ಪೌಡರುಗಳನ್ನು ಸಪ್ಲೆಮಾಡುವುದೂ ತುಂಬಾ ಕಷ್ಟವಾಗುತ್ತದೆ. ಆದರೆ ಕೆಲವುಜನ ಹಳೆ ಕೈಗಾರಿ ಕೋದ್ಯಮಿಗಳು 'ಕಚ್ಚಾಫಿಲಂ'ನ್ನು ಇಲ್ಲಿಯೇ ಹೆಚ್ಚು ತಯಾರಿಸಬೇಕೆಂದು ವಾದ ಹೂಡುತ್ತಾರೆ. ಆದರೆ ಇದು ಸಧ್ಯಕ್ಕೆ ಏನೂ ಪ್ರಯೋಜನವಿಲ್ಲ. ಮುಖ್ಯವಾಗಿ ಸೌಂದರ್ಯ ಚಿಕಿತ್ಸಾಸಾಮಗ್ರಿಗಳನ್ನು ತಯಾರಿಸುವುದರಲ್ಲಿ ನಾವು ಸ್ವಯಂ ಪರಿ ಪೂರ್ಣತೆಯನ್ನು ಸಾಧಿಸಿಕೊಂಡ ಹೊರತು 'ಕಚ್ಚಾಫಿಲಂ' ಕೈಗಾರಿಕೆಗೆ ಕೈಹಾಕು ವಂತಿಲ್ಲ. ಆದ್ದರಿಂದ ಅದನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳುವುದೇ ಬುದ್ಧಿವಂತಿಕೆ. ಲಿಪ್‌ಸ್ಟಿಕ್; ಉಗುರಿನ ಪಾಲಿಷ್ ಮುಂತಾದುವಗಳನ್ನು ಉಪ ಯೋಗಿಸುವುದರಲ್ಲಿ ಹೆಂಗಸರಿಗೂ, ಗಂಡಸರಿಗೂ ಪರಸ್ಪರ ಸ್ಪರ್ಧೆ ಹುಟ್ಟಿ, ಸಾರ್ವ ಜನಿಕ ರಂಗ (ಅರ್ದಾತ್ ನಿಮ್ಮ ಸಮಸ್ಯೆಗೆ ನಮ್ಮ ಉತ್ತರ)ದಲ್ಲಿ ಹೆಂಗಸರು ಗಂಡಸರು ಎಂಬ ತಾರತಮ್ಯ ಮನೋಭಾವ ನಮ್ಮ ರಾಜ್ಯಾಂಗದ ರೀತ್ಯ ಸಂಪೂರ್ಣ ವಾಗಿ ಮಾಯವಾಗಿ ಭಾರತದ ಕೀರ್ತಿ ಇನ್ನೂ ಹೆಚ್ಚುತ್ತದೆ.

ಪ್ರತಿಯೊಂದು ಊರಿನಲ್ಲಿಯೂ ಸೌಂದರ್ಯ ಚಿಕಿತ್ಸೆಗೆ ಕ್ಲಿನಿಕ್‌ಗಳನ್ನೂ (ಫ್ಯಾಮಿಲಿ ಪ್ಲಾನಿಂಗ್ ಕ್ಲಿನಿಕ್‌ಗಳ ಜೊತೆಗೆ) ಬ್ಯೂಟಿಕಲ್ಚರ್ ಇನ್‌ಸ್ಟಿಟ್ಯೂಟ್ ಗಳನ್ನು ತೆರೆದು ಸಂಬಂಧಪಟ್ಟ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಲ್ಯಾಬರೇಟರಿ ಗಳಲ್ಲಿ ಮುಖಚಿಕಿತ್ಸೆಗೆ ಹೊಸ ಹೊಸ ಪೇಸ್ಟುಗಳನ್ನು, ದ್ರಾವಕಗಳನ್ನು, ಸೋಪು ಗಳನ್ನು ತಯಾರಿಸಲಾಗುವುವು. ಸೋಷಯಲಿಸ್ಟಿಕ್ ಪ್ಯಾಟ್ರನ್ ಸೊಸೈಟಿಯ ನೀತಿಗನುಸಾರವಾಗಿ ಸೋಪಿನ ಕೈಗಾರಿಕೆ ರಾಷ್ಟ್ರೀಕರಣವಾಗುವುದು ಈಗ ಹಾಲಿ ಚಾಲ್ತಿಯಲ್ಲಿರುವಂತೆ - ಸೂರಯ್ಯ ಹೇಳುತ್ತಾಳೆ, ಜಮುನ ಹೇಳುತ್ತಾಳೆ, ಮೀನಾ ಕುಮಾರಿ ಹೇಳುತ್ತಾಳೆ ಎಂದು ಸೋಪುಗಳು ಜಾಹಿರಾತಾಗುವ ಕ್ರಮ ನಿಂತು ಇಂತಿಂತಹ ಬಣ್ಣದ ಚರ್ಮಕ್ಕೆ ಇಂತಿಂತಹ ನಂಬರಿನ ಸಾಬೂನು ಅಂತ ಸ್ಟುಡಿಯೋ ಡಾಕ್ಟರುಗಳೇ ನಿರ್ಧರಿಸಿಬಿಡುತ್ತಾರೆ. ಚಲನಚಿತ್ರ ಕೈಗಾರಿಕೆಯಲ್ಲಿ ಅತ್ಯಂತ ಅದ್ಭುತವಾದ ಕ್ರಾಂತಿ ಎಂದರೆ ನಮ್ಮ ಚಿತ್ರಗಳಲ್ಲಿ ಅಭಿನಯಿಸಲು ಅಮೇರಿಕ ಕೋತಿಗಳನ್ನು ಆಮದುಮಾಡಿಕೊಳ್ಳುವ ದುರವಸ್ಥೆ ತಪ್ಪಿಹೋಗುವುದು. ನಮ್ಮ ದೇಶದಲ್ಲೇ ಹೆಚ್ಚು ಹೆಚ್ಚು ಕೋತಿಗಳು ಮುಂಬರುವ ದಿನಗಳಲ್ಲಿ ಪರದೆಯಮೇಲೆ ಕಾಣಿಸಿಕೊಂಡು ಹಾಲಿವುಡ್ಡಿಗೂ ಜಿಪ್ಪಿ ಇಲ್ಲಿಗೆ ಬಂದಂತೆ ಹೋಗಿಬರುವುವು.

ಪ್ರತಿದಿನವೂ ಸಾವಿರಾರು ಚಿತ್ರಗಳು ದೇಶದ ಸಾವಿರಾರು ಥಿಯೆಟರುಗಳಲ್ಲಿ ರಿಲೀಸ್ ಆಗುವುದರಿಂದ ಪತ್ರಿಕಾ ಪ್ರಪಂಚದಲ್ಲಿ ಭಾರಿ ಕ್ರಾಂತಿಯಾಗುವ ಸಂಭವ ವಿದೆ. ಅಂತರ ರಾಷ್ಟ್ರೀಯ ಸುದ್ದಿಗೆ ಈಗಿರುವ ಪ್ರಾಮುಖ್ಯತೆ ಇನ್ನು ಕೆಲವೇ ವರ್ಷಗಳಲ್ಲಿ ಮಾಯವಾಗಿ ಸಿನಿಮ ಸುದ್ದಿಗಳು ಪೇಪರುಗಳ ತುಂಬ ತುಂಬಿರುತ್ತವೆ. ಈಗಿನ ಹಾಗೆ ಚಲಚ್ಚಿತ್ರ ಪತ್ರಿಕೆಗಳು, ವೀಕ್ಲಿ, ಮಂತ್ಲಿಗಳಾಗಿರದೆ 'ಡೈಲಿ'ಗಳಾಗುತ್ತವೆ. ಮಾರ್ನಿಂಗ್ ಎಡಿಷನ್‌ಗಳು ಕೆಲವು, ಈವಿನಿಂಗ್ ಎಡಿಷನ್‌ಗಳು ಹಲವು.

ಅಂತೂ ಭಾವಿ ಭಾರತದಲ್ಲಿ ಜನರು, ಚಲನಚಿತ್ರವನ್ನು ತಯಾರಿಸುತ್ತಿರುತ್ತಾರೆ, ಅಥವ ದಿಗ್ದರ್ಶಿಸುತ್ತಿರುತ್ತಾರೆ ಅಥವ ನಡಿಸುತ್ತಿರುತ್ತಾರೆ, ಅಥವ ಹಾಡುತ್ತಿರುತ್ತಾರೆ (ಸ್ಟುಡಿಯೋಗಳಲ್ಲಿ) ಇವು ಯಾವುದನ್ನೂ ಮಾಡದ ಹಲವರು ಹಾಯಾಗಿ ಕೂತು ಸಿನಿಮ ನೋಡುತ್ತಿರುತ್ತಾರೆ – ಇನ್ನು ಉಳಿದ ಹಲವರು ಟಿಕೆಟ್‌ಗೋಸ್ಕರ ಹೊರಗಡೆ ಕ್ಯೂ ನಿಂತಿರುತ್ತಾರೆ!

—ಹಾ. ರಾ.



ಸ್ಕೂಲಿಗೆ ಹೋಗುಲ್ಲ ಅಂತಾನೆ ನೋಡಿ! ಮಾಸ್ತರೇ!!
ಮನೇಲೇ ತೋಟ ಮಾಡ್ತೀನಿ, ಕಸಗುಡಸ್ತೀನಿ; ಮುಸುರೆ ಬೇಕಾದರೂ ತಿಕ್ಕ್ತೀನಿ
ಅಂತ ಹಠಹಿಡಿದಿದ್ದಾನೆ!!

ಸಾ ಲ !

ಸಾಲವೆಂಬುದು ಅನಂತವಾಹಿನಿ |
ಎಲ್ಲ ಜನರನೂ ಕೊರೆದು ಬೆಳೆಯುವೀ ||

ಜೀವಕೋಟಿಗಳ ಕೋಟಲೆಗಳಿಹವಿಲ್ಲಿ |
ಭಾವ ಜೀವಿಗಳ ಆಶೆ ಮೂಡುವುದಿಲ್ಲಿ ||
ಸಾವು ನೋವುಗಳು ಮೇಲೆನಿಸುವುದಿಲ್ಲಿ |
ಬೇವ ಕುದಿವರಿಯುವ ಶೋಕವಿಹುದಿಲ್ಲಿ ||

ಗರುವ ಗಾಂಭೀರ್ಯಗಳು – ಮೆರೆವ ವೈಯ್ಯಾರಗಳು |
ಸಿರಿಪೆಣ್ಣ ಸೌಂದರ್ಯವೆಲ್ಲವಿಹುದಿಲ್ಲಿ ||
ಮರೆಸಿ ಮಾತುಗಳಾಡಿ ಬಲೆಹಾಸುವುದಿಲ್ಲಿ |
ಬಿರಿಬಾಯ ನಗೆಯಾಡಿ ಥಳುಕಿರುವುದಿಲ್ಲಿ ||

ಇದರಾಳ ಕಂಡವರಿಲ್ಲ – ಮೂಲವರಿತವರಿಲ್ಲ |
ಇದರ ಸಂತಾನ ಸೊಬಗ ಕಾಣದವರಿಲ್ಲ ||
ಸರಳಬಡ್ಡಿ – ಚಕ್ರಬಡ್ಡಿ – ಇತ್ಯಾದಿಯೆಲ್ಲವೂ |
ಜರೆಯರಿಯದೆ ಬೆಳೆಯುವುವು ಇದರಲ್ಲಿ ||

ಆವ ಸರಕಾರವೂ ಇದನು ಮರೆತಿಲ್ಲ |
ಯಾವ ಸಂಸಾರವೂ ಇದನು ಮೀರಿದುದಿಲ್ಲ ||
ಕವನ ಕಾದಂಬರಿಗಳೂ ಇದಕೆ ಹೊರತಲ್ಲ ||
ವಿಕಟಕವಿಗಳಿಗಿದುವೆ ತೌರಲ್ಲಾ ! !

ಸಮಜೋಡಿ

(ನಮ್ಮರಗಳೆಯಲ್ಲಿ ಒಂದು ಅಪುರೂಪಕ)

ಪಾತ್ರಗಳು:—

೧ ನರಸಿಂಹಯ್ಯ .... ಗಂಡು ಹೆತ್ತವ.
೨ ಸುಂದರಮ್ಮ .... ಶ್ರೀಮತಿ ನರಸಿಂಹಿಣಿ.
೩ ಗುಂಡೂರಾಯ .... ಗಂಡು.
೪ ಕಪನಿಪತಿ .... ಹೆಣ್ಣು ಹೆತ್ತವ.
೫ ಭಾಗ್ಯಮ್ಮ .... ಶ್ರೀಮತಿ ಕಪನಿಪತಿ.
೬ ಕಾಮಾಕ್ಷಿ .... ಹೆಣ್ಣು.
೭ ವೆಂಕಟಕೃಷ್ಣ .... ಮಧ್ಯಸ್ಥ, ಉಭಯತ್ರ ಮಿತ್ರ.

— ೧ —

[ನರಸಿಂಹಯ್ಯ ನಿವಾಸ—ಮಾಮೂಲು ತಾಪತ್ರಿಯಲ್ಲ, ಒಂದು ಕೈಮೇಲು ಮೆಟ್ಟಿಲವಾಸ. ಆರಾಮು ಕುರ್ಚಿ ಮೂಲೆಯಲ್ಲಿ ಮೇಜು, ಭೋಜನಾರೀವಿಳುಲಿ ಅಯ್ಯ ಮಂಡಿಸಿಹ ಮಂದ ಹಾಸವ ಬೀರಿ. ಗೊಣಗಂತಿಹ 'ಶ್ರೀವತೆಯರಸನೆ' ಪದ್ಯ. ಊಟ ಮುಗಿಯಿಸಿ ಮೆಲ್ಲುತ್ತ ಮದಗಜಗಮನೆ ಮಡದಿ ಸುಂದರಮ್ಮನ ಪ್ರವೇಶ, ಕೈಯ್ಯಲ್ಲಿ ತಾಂಬೂಲ ತಾಟು ಮುಖದಲ್ಲಿ ಗಂಟು ಭಾವ.]

ಸುಂದರಿ :—ನಿರ್ಲಿಪ್ತ ನಿಯೋರ್ಚನೆಯ ನಿಸ್ಸೀಮರು ನೀವು. ಕೈಗೆ ನೀರು ಬಿದ್ದೊಡನೆ ನಿಶ್ಚಿಂತೆಯಲಿ ಗೊಣಗುವಿರಿ 'ಶ್ರೀವನಿತೆಯರಸನೆ' ಎಂದು. ಏನು ರೀತಿಯಿದು ಗಡಾ! ಯೋಚನೆಯೆ ಬೇಡವೆ?

ನರಸಿಂಹ :—ಏನು ಯೋಚನೆ ರಮಣಿ–ಮೆಂತ್ಯಧಿಟ್ಟಿನ ಸವಿಯು–ಹುರುಳಿ ಹೆಪ್ಪಳ ನುಗ್ಗೆಕಾಯ್‌ಹುಳಿ, ಬಡಿಸಿದಾ ಮದಗಜ ವದನೆ ಮೇಣ್ ವರಸೆ ವರಸೆಯ ನೇವಿದ್ಯಕಲಸಿ ಮೆಲ್ಲು ವೊಡೆ ಯಾವ ಯೋಚನೆ ನನಗೆ ನಳಿನದಳಾಯಿತಾಕ್ಷಿ?

ಸುಂದರಿ :—ಪರಿಹಾಸ್ಯವೇ ನಿಮಗೆ ಪಿರಿದಾಯ್ತು ಗಡ–ಕೊತ್ತುಂಬ್ರಿ ಸೊಪ್ಪಿನಿಂ ಪಿಡಿದು–ನಿಮ್‌ಷರಟು ಇಸ್ತ್ರಿ ತನಕ ಸಂಸಾರ ಸಾಗರದ ದೋಣಿ ನಡೆಸುತಲಿಹೆನು, ಒಂದಲ್ಲ ಎರಡಲ್ಲ, ಮೂರಲ್ಲ ನಾಲ್ಕಲ್ಲ, ಇಪ್ಪತ್ತೆಂಟು ಸಂವತ್ಸರಗಳ ದಾಟಿ ಬಂದಿಹೆನು, ಕಡೆಯ ಕೋರಿಕೆ ದುಮ್ಮಾನ ಸುಮ್ಮಾನ ಸಂಭ್ರಮದ ಕಲ್ಯಾಣ-ಎನ್ನ ಕುವರನಿಗೊಂದು ಕನ್ಯೆ ತಂದೊಡೆ ಎನ್ನ ಕೊರಗುವ ಮನಕೆ ನೆಮ್ಮದಿಯ ನಿತ್ತಂತೆ ಆದೀತು.

ನರಸಿಂಹ :—ಹ ಹ್ಹ ಹ ಹ್ಹ ಕಲ್ಯಾಣ. ಸುಂದರೀ ! – ಅಂ – ಏನಂದೆ? ಸುಂದರೀ ಎಂದೆನೆ? ಹಾಗೆಂದೆ ಎನಬೇಕು – ಗುಗ್ಗುರಿ ಹಂಚಿ ತೊಟ್ಟಿಲಿಗಿಕ್ಕಿ ಸೋದ ರಚ್ಚೆ ಕಿವಿಯಲ್ಲಿ ಬಾಯ್ ತುರುಕಿ ಸುಂದರೀ ಸುಂದರೀ ಎಂದೊರಲಿದಂದಾ ದಿನದಿಂದ ಸುಂದರಿಯೆ ನೀನಾದೆ....ಆದೊಡಂ.

ಸುಂದರಿ :—ಆದೊಡಂ – ಏನಾದುದು ಪ್ರಾಣೇಶ್ವರಾ.

ನರಸಿಂಹ :—ಕಮ್ಮಾರನಾ ಒಲೆಯ ತಿದಿಯೊತ್ತಿ ಅದರಲ್ಲಿ ತಲೆ ತುಂಬಿದವ ರುಂಟೆ? ನಾನೆಡೆದ ಮುಳ್ಳಿನಾವಿಗೆಯಲ್ಲಿ ಮಗನ ಕಾಲ್ ತುರುಕುವುದುಂಟೆ?

ಸುಂದರಿ :—ಏನೇನೋ ಒದರುತಿಹಿರಿ – ಇಂದೇಕೋ ಮಾತೆಲ್ಲ ಒಗಟಾಗಿ ಕಾಡುತಿರುವಂತಿದೆ. ನೋಡಿದಾ ಮಂದಿ ನಕ್ಕಾರು ಕಿಸಿಕಿಸಿ ಹಲ್ಲುಬೀರಿ.

ನರಸಿಂಹ :—ಅಂದು ಮಾಘ ಶುದ್ಧ ನವಮಿ ಶುಕ್ರವಾರದದಿನ ಅಂತರ ಪಟ ಹಿಡಿದ – ವೇದಘೋಷದೊಡನೆ ಸುಲಗ್ನಾ ಸಾವಧಾನಾ ಎಂದೊದರಿದ ಪುರೋಹಿತರ ಶಂಖವಾದ್ಯದ ನಡುವೆ ಯಾವ ಧೈರ್ಯದಿ ನಿನ್ನ ಕರಿ ಕೊರಳ ಸುತ್ತಲಿಯೆ ಮಾಲೆ ಹಿಡಿದಿದ್ದೆ ಅರಿವುಂಟೆ ಅರ್ಧಾಂಗಿ?

ಸುಂದರಿ :—ನಿಮ್ಮ ಮನದಾಲೋಚನೆಯು ನನ್ನ ತಲೆಗೆಂತು ಏರೀತು?

ನರಸಿಂಹಯ್ಯ – ಏನಪೇಳಲಿ ನಿನ್ನಬಳಿ ಎಲೆ ಹೆಣ್ಣೆ, ಅಂದು ಮಂತ್ರಾಕ್ಷತೆಯು ಹತ್ತಾರು ಹಿರಿಕಿರಿಯ ಕರಗಳಿಂ ಭಿರಿಭಿರೆಂದು ಬೀಳಲಿಲ್ಲವೆ? ಉಪ್ಪಿನಾನೆಯ ಸೇರಿ – ಅಕ್ಕಿ ಆನೆಗೆ ಸೇರಿ, ಅಕ್ಕಿ ಉಪ್ಪೇ ಜೀವನ ಜೀವಾಳವೆಂಬ ಐತಿಹ್ಯ ಆಲೋಚಿಸುತ ಕುಳಿತಿರಲು, ನಿನ್ನ ಕರಿಕಮಲ ಕೈಗಳನು ಎನ್ನ ಪಿರಿಮುಷ್ಟಿಯಲಿ ತುರುಕಿ, ಅಗ್ನಿದೇವನೆ ಗತಿ ಎಂದು, ಸುತ್ತಲಿಲ್ಲವೆ ಯಜ್ಞಕುಂಡದ ಸುತ್ತ?

ಸುಂದರಿ—ಏನೇನೋ ಹೇಳುವಿರಿ – ನಿಮ್ಮೀಯ ಮಾತಿನಾ ಮಂಟಪವು ನನಗೆ ಕನಸಿನಾ ಮನೆಯಂತೆ ಕಾಣ್ಬುವುದು. ಈ ಎಲ್ಲ ಅಪಭ್ರಂಶ ಆರ್ತ ಆಟಾಟೋಪ ಎನ್ನ ಬರಿತಲೆಗೆ ಎಂತು ಇಳಿದೀತು? ಕುವರನ ಕಲ್ಯಾಣದಾ ಮಾತು ಮರೆತಿರಾ!

ನರಸಿಂಹ :—ಮಾತಿನಮಲ್ಲಿ – ನಿನ್ನದದು ಬರಿತಲೆಯೆ! ನಿನ್ನ ಮಾತಿನವರಸೆ ನನ್ನ ಗಂಟಲಿಗೆ, ಗಾಣದಂತಿದೆ ಕಣಾ · ಇನ್ನು ಕುವರನ ಕಲ್ಯಾಣದಾಚಿಂತೆ ನಿನ್ನ ಕೊರಳಿಗೆ ಕರಿಮಣಿಯ ಬಿಗಿದ ಆ ದಿನದಿಂದ ಇಂದಿನ ಈ ದಿನದ ತನಕ ಎಳೆತಂದ ಕಾಲ ಮರೆವುದೆಂತು? ಈ ದಿನಗಳನು ನೆನೆದೂ ಯಾವ ಕ್ಷೆಯಲಿ ಈ ಕುವರನಿಗೆ ಕನ್ಯೆಯೊಂದನತರಲಿ ಪೇಳು ಮಾವನ ಮಗಳೆ.

ಸುಂದರಿ :—ಸಾಕಿನ್ನು ಕುಚೇಷ್ಟೆಯ ಮಾತು. ಕಪನೀಪತಯ್ಯ ಕಳುಹಿದ ಜಾತಕವ ನೋಡಿಸಿದಿರಾ? ನಾವು ಕಳುಹಿದ ನಮ್ಮ ಗುಂಡನ ಜಾತಕವ ಅವರು ನೋಡಿಸಿದರೆ? ಮುಂದೇನು ಮಾತುಕತೆ ಹುಡುಗಿ ಹುಡುಗನ ಒಪ್ಪುವಾ ಸಂಭ್ರಮದ ಮೀಟು ಮಾಡುವ ಆಟ ಯಾವಾಗ ಹೂಡಿಸುವುದ?

ನರಸಿಂಹ :—ಏನೆಂದೆ! ನಾಂಪೋಗಿ ಕಪಿನಿಪತಿಯ ಕೇಳುವುದೆ? ಗಂಡು ಹೆತ್ತವನಾನು ಹೆಣ್ಣು ಹಡೆದವನವನು, ಬೇಕಾದೊಡೆ ಬಂದೆನ್ನ ಕಾಲಿಗೆ ಬಿದ್ದು ಬೇಡಿಕೊಳ್ಳಲಿ 'ಸ್ವೀಕರಿಸಿ ಎನ್ನ ಕುವರಿಯನು ನಿಮ್ಮ ಕುಮಾರ ಕಂಠೀರವಗೆ! ಎಂದು ಆಗ ಯೋಚಿಸೆವು ನಾವು ನಿಮ್ಮಪ್ಪ ನಮ್ಮಪ್ಪನನು ಹೀಗೆ ಬೇಡಿದರಲ್ಲವೆ?

ಸುಂದರಿ :—ನಮ್ಮ ಕಾಲದ ಮಾತು ಈಗ ಆಡಿದೊಡೇನು ಹುಂ.... ನಮ್ಮಪ್ಪನಾ ನೆತ್ತಿಯಲಿ ಬುದ್ಧಿ ಎಲ್ಲಿತ್ತೋ – ಇದ್ದೊಡಂ ಪಂಚೇರು ಬಂಗಾರ ದೊಡಗೂಡಿದಾ, ಲಕ್ಷ್ಮಿಯಂತಹ ನನ್ನ ಈ ಸಿಂಹ (ನರ!) ದಾಬೋನಿಗೆ ನೂಕುತಿರ್ದರೆಂ!

ನರಸಿಂಹ :—ಲಕ್ಷ್ಮಿ....ಗಜಲಕ್ಷ್ಮಿ ಎಂದೆನ್ನು ಸುಂದರೀ ಅಜಗಜಾಂತರ ದೂರ ಹೆಸರಿಂಗೆ (ನರ)ಸಿಂಹನಾದೊಡುಂ ನಿನ್ನ ಗಾತ್ರದ ಮುಂದೆ ಅಜನೆ ನಾನಲ್ಲದೆ ಮತ್ತೇನು ಪ್ರಿಯೆ! ಯಾವ ಧೈರ್ಯದಿ ನಿನಗೆ ಮಾಲೆ ಹಾಕಿದೆ ಬಲ್ಲೆಯಾ!

ಸುಂದರಿ :—ನಿಮ್ಮ ಮಾತೇ ಮಾತು. ಬೀರಿಳಿಯದ ಗಂಟಲೋಳ್ ಬ್ರೆಡ್ಡಂ ತುರುಕಿದಂತಾಯ್ತು ಗಡ; ವೈಲಾರ ಮುಟ್ಟಲಿಗೆ ಕೊಂಕಣವ ಸುತ್ತಿದಂತಾಯ್ತು. ಅದೇನು ಕಾರಣ ಹೇಳಬಾರದೆ ರಮಣ!

ನರಸಿಂಹ :—ಅಂದು ಕಲ್ಯಾಣ ಮಂಟಪದಿ ಕನಕಾಂಗೀ! ಕನಕಾಂಬರದ ಪೀತಾಂಬರವನುಟ್ಟು ಪಂಚೇರು ಕನಕವ ಹೊತ್ತು, ಬೈತಲೆ ಮುತ್ತು ವಜ್ರದೋಲೆ ಒಪ್ಪಿತ್ತು ನಿನ್ನ ಕುಬ್ಜ ದೇಹಕ್ಕೆ. ಬಂಗಾರದಾ ಮೆರಗೆ ನೂರು ಮಾಡಿತು ನನ್ನ ಮನಸ, ನಿನ್ನ ರೂಪಲ್ಲ ಕಂಡ್ಯ ಕನ್ನಡತಿ!

ಸುಂದರಿ : ಆಯ್ತಾಯ್ತು – ಗತವೈಭವಕೆ ನಾ ಹೊತ್ತು ತಂದ ಬಂಗಾರವೇ ಗತಿಯಾಯ್ತೆಂದು ಅರ್ಥವಾಯ್ತು. ವೈಭವದ ಉತ್ಸವ ಮೂರ್ತಿ ಗುಂಡನಿಗೆ ಹೆಣ್ಣು ನೋಡುವ ಚಿಂತೆ ಮರೆತಿರಾ ಮೋಹನಾಂಗ.

ನರಸಿಂಹ :—ಮರೆಯಿದಲ್ಲವೆ, ವೆಂಕಟಕೃಷ್ಣ ಬಂದಿದ್ದ, ಕಪಿನೀಪತಿ ಸತಿ ಸುತಳೊಡನೆ ಬರುವನಂತೆ ನಾಳೆ ಮುಂಜಾನೆ ಎಲ್ಲ ಅಣಿಯೆ?

ಸುಂದರಿ :—ಇದಕ್ಕೇ ನನ್ನ ಪಿತ್ತ ನೆತ್ತಿಯಲಿ ಕೆರಳುವುದು. ಈ ಮಾತು ಹೇಳಲಿಕೆ ಏಸೊಂದು ಸುತ್ತು – ಏಸೊಂದು ಬಳಸು. ಅಣಿಯಾಗಲಿಕೆ ನಾನೇನು ಹೆಣ್ಣು ಹಡೆದವಳೇನು? ಭಾಗ್ಯಮ್ಮ ಅಣಿಯಾಗಿ ಬರಲಿ ಮಗಳ ತೋರಿಸಲಿಕ್ಕೆ.

ನರಸಿಂಹ : –ಈ ಕೊಬ್ಬೆ ನಿನ್ನ ಕೋಡಂಗಿಯಂತೆ ಕುಣಿಸುತಿಹುದು ಕನ ಕಾಂಗೀ, – ಗುಂಡಯ್ಯ ಕನುಕೊಂಟನಿ ಊದಿಸಿಕೊಂಡು ಹಸೆಮೇಲೆ ಕೂತಾಗ ಜೊತೆಗಿರಲು ಹೆಣ್ಣೊಂದು ಬರುತಿಹುದು ಅದುವೆ ಆ ಧಾಂಡಿಗನ ಪುಣ್ಯ ಎಂದೆಂದು ಕೊಂಡಿರಲು ಆಗಲೇ ಅಟ್ಟವನೇರಿ ಅಟ್ಟಹಾಸದಿ ಜಂಭ ಹೊಡಿಯಲುಬೇಡ.... ಸುಂದರೀ ೯ ...ಭಾಗ್ಯಮ್ಮನಾ ಮಗಳು ಕಾಮಾಕ್ಷಿ ಈ ಗುಂಡ ಬೇಡೆಂದು ಮುನಿಸು ಮಾಡಿದೊಡೆ ಏನಮಾಳ್ಪೆಯೆ ಹೇ ಮಾವನಾ ಮಗಳೇ

ಸುಂದರಿ —ಅಹುದಹುದು.... ನೀವು ಪೇಳುವುದು ದಿಟ ಗುಂಡ ಎಲ್ಲ ರಂತಲ್ಲ ಎಂಬ ಸತ್ಯವನೆ ಮರೆತಿದ್ದೆ.

ನರಸಿಂಹ :—ಸಧ್ಯ ಅರಿವಾಯ್ತಲ್ಲ ನಿನ್ನ ಕುಮಾರ ಕಂಠೀರವನ ಪಾಡು – ಹೇ ಸುಂದರೀ ಹಾಗೆಯೇ ನಿಂತು ಮಾತಾಡುತಿರುವಿ ಎಲೆ ಅಡಿಕೆ ಮಡಿಸಿಕೊಡು – ಗುಂಡನೆಲ್ಲಿ?

ಸುಂದರಿ :—ಎಲ್ಲಿ ಉಂಡಲೆಯುತಿಹನೋ – ಏನು ಓದೋ ನಾಲ್ಕಾಯ್ತು ದಂಡಯಾತ್ರೆ ಈಪಿಯುಸ್ಸೂ ಕಾಣೆ.

ನರಸಿಂಹ :—ಇನ್ನೆರಡು ಎಲೆಯಕೊಡು – ಬಹುಬೇಸರ ಸಖಿ ... ಬಾಗಿಲು ಮುಂದಕೆ ಮಾಡು.

ಸುಂದರಿ :—ಥೂ.... ಹೋ ೯ ಗೀ ೯ ಂದರೇ ೯....

(ತೆರೆ)

—೨—

[ರಸ್ತೆ. ಕಪನೀಪತಿ ಸತಿಸಹಿತ ಬರುತಿಹನು. ಭಾರಿ ಸೀರೆಯನುಟ್ಟು ಕಾಮಾಕ್ಷಿ ಹಿಂದೆಯೇ ನಡೆದಿಹಳು]

ಕಪನೀಪತಿ :—ದೂರದಾ ನೆಂಟರೆಂದೆಂದೆಯಾ ಭಾಗೂ ಈ ಗುಂಡನಪ್ಪ.

ಭಾಗ್ಯಮ್ಮ :—ಅಲ್ಲವೇ ... ನಮ್ಮ ಅಕ್ಕ ಸೀತಕ್ಕನಾ ಗಂಡ ಶ್ರೀನಿವಾಸನ ಪಕ್ಕ ಪೀತಾಪುರಿ ಪರಮೇಶಿ ಇಲ್ಲವೇ

ಕಪನೀಪತಿ :—ಅಹುದಹುದು.... ಅವನಿನ್ನು ಇರುವನೇನು! ನೆಗೆದು ಬಿದ್ದಿರ ಬೇಕೆಂದು ತಿಳಿದಿದ್ದೆ.

ಭಾಗ್ಯ:—ಬಿಡಿತೆನ್ನಿ....ಆ ಪರಮೇಶಿಯು ಪಕ್ಕದ ಮನೆಯಲ್ಲಿರಲಿಲ್ಲವೇ ಗೋವಿಂದಯ್ಯ....ಅವನ ಚಿಕ್ಕಪ್ಪನ ತಮ್ಮನಾ ಭಾವಮೈದುನರೇ ಈ ನರಸಿಂಹಯ್ಯನವರು.

ಕಪನೀಪತಿ :—ಹ ಹ ಹ ಹ....ಹತ್ತಿರವೆ ಆಯ್ತಲ್ಲ ಭಾಗ್ಯ .. ಭಾಗ್ಯ ಸೀತೆಯಾ ಗಂಡ ಆ ಗುಂಡನ್ನೇ ಎಂದು ಪರಬ್ರಹ್ಮ ಜಾತಕದಿ ಬರೆದಿರಲು, ನಾವು ಬಿಡಿಸುವುದುಂಟೆ!

ಭಾಗು :—ಶ್ರೀನಿವಾಸನ ದಯದಿ ಒಪ್ಪಿದರೆ ಸಾಲದೆ, ನಮ್ಮ ಸೀತೆಯ ಪುಣ್ಯ.

ಕಪನಿಪತಿ :—ಭಾಗೂ – ಭಾಗ್ಯವಿಲ್ಲದ ಬಡನಾದೊಡಂ ನಿನ್ನೊಡಲ ಮಗು ಕಾಮಾಕ್ಷಿ ರೂಪಿನಲಿ ಭಾಗ್ಯವಂತಳು ಹೌದು ಆದೊಡಂ....ದೇವರಾದಯ ಈ ಕೂಸು ಮಾತನಾಡದೆ ಇದ್ದೊಡೆ ನಂಪುಣ್ಯ.

ಭಾಗು : – ಭಗವಂತನಿಹ ಗುಡಿಯಲ್ಲಿ – ಭಯವೇನು ಆರ್ಯ ನಡಿಯಿರೀ ಹೋಗುವಾ....

ಕಪನಿಪತಿ :—ಸರಿಹೋಯ್ತು ...ವೆಂಕಟಕೃಷ್ಣ ಬಹೆನೆಂದು ಪೇಳಿದ್ದು ಮರೆತೆಯಾ – ಮದುವೆ ಕಾರ್ಯದಲಿ ಮಧ್ಯಸ್ಥ ನಿಲ್ಲದಿರೆ ಸಾಧ್ಯವುಂಟೆ?....ಆಗಲೇ ಸಮಯ ಸವೆಯುತಿದೆ ಮತ್ತೇಕೆ ಬರಲಿಲ್ಲ ಈ ವೆಂಕಟೇಶ!

[ಈ ಸಮಯದೋಳ್ ಅತುರದಿ ವೆಂಕಟಕೃಷ್ಣ ಬರ್ಪನ್]

ವೆಂಕಟಕೃಷ್ಣ :—ಕೈಹಿಡಿದ ಕಣ್ಮಣಿಯು ಕಾಫಿ ಆರಿಸಿ ಕೊಡಲು ಈ ಪಾಟ ಕಾಯ್ಸಿದಳು – ವೇಳೆಯಾಯ್ತೆಂದು ಸಿಟ್ಟಾದೆಯ ಕಪಿನಿಪತಿರಾಯಾ....

ಕಪನಿಪತಿ : – ಸಧ್ಯ ಬಂದೆಯಲ್ಲಯ್ಯ ಅದುವೆ ನಂಕಾಮಾಕ್ಷಿಯಾ ಪುಣ್ಯ – ನಡುನೀರಿನಲಿ ಕೈಬಿಡುವಿ ಎಂದೆನ್ನ ಎದೆ ಡಬಡಬತ್ಕರಿಸಿ ತತ್ತರಿಸುತ್ತಿತ್ತು.

ವೆಂಕಟಕೃಷ್ಣ :—ಬೆದರದಿರು ಬಂಧು – ಕಾಮಾಕ್ಷಿ ಕಲ್ಯಾಣದಲಿ ಕರಿದ ಶ್ಯಾವಿಗೆ ಖೀರ ಕುಡಿಯದಿರ್ದೊಡೆ ನನ್ ಹೆಸರು ವೆಂಕಟನೆ ಅಲ್ಲ.

ಭಾಗ್ಯಮ್ಮ : —ನಿಮ್ಹೆಸರು ನಿಲ್ಲಲಿ....ಕಾಮು ಸೆರಗುಸರಿಯಾಗಿ ಹೊದ್ದುಕೊ- ಅವರ ಮನೆಯಲ್ಲಿ ಚೆಲ್ಲು ಚೆಲ್ಲಾಗಿ ಆಡದಿರು – ದೇವರಿಗೆ ಕೈಮುಗಿದು ಪ್ರಾರ್ಥನೆಯ ಮಾಡು, ಭೀಮನಮಾವಾಸ್ಯೆಯ ದಿನದಿ ತುಪ್ಪದಾದೀಪವ ಹಚ್ಚಿ ಕೈಮುಗಿದಿದ್ದೆಯಲ್ಲವೆ ಅದುವೆ ಪುಣ್ಯ ನಿನ್ನ ಕಾಯಬೇಕೆಂದು.

ಕಪನಿಪತಿ :—ನಡಿ ನಡಿಯೇ ಭಾಗ್ಯಲಕ್ಷ್ಮಿ ನಡಿ ಸಾಕು ನಿನ್ನಯ ನುಡಿಯು ನಡುರಸ್ತೆಯಲ್ಲಿ....

[ಗಹಗಹಿಸಿ ವೆಂಕಟನು ನಕ್ಕಾಗ–ಕಾಮಾಕ್ಷಿ ನಾಚಿ ಮುದುಡಿದಾಗ ಮಡದಿ ಮಕ್ಕಳ ಕೂಡಿ ಸಡಗರದಿ ನಡದರು ಗಂಡು ಗುಂಡನ ಮನೆಗೆ]

(— ತೆರೆ —)

[ಹಾಸಿದಾ ಜಮುಖಾನ–ಒಂದೆಡೆಗೆ ಕುಳಿತಿಹರು ಗಂಡಿನಾಕಡೆಯುವರು, ಮತ್ತೊಂದೆಡೆಗೆ ಕಾಮಾಕ್ಷಿಯೊಡಗೂಡಿ ಭಾಗ್ಯಮ್ಮ ಕುಳಿತಿಹರು, ಮಗ ಮಗಪ ಮಲ್ಲಿಗೆಯ ಪರಿಮಳವ ಚೆಲ್ಲತಿಹುದು ಅಗರಬತ್ತಿ–ಆಗತಾನೇ ಮುಗಿದ ಉಪ್ಪಿಟ್ಟು ಕಾಫಿಯ ಲೋಟ ಅಲ್ಲಲ್ಲ ಬಿದ್ದಿಹುದು– ತೆರೆ ಎದ್ದಾಗ]

ನರಸಿಂಹ :—ಕೆಳದಿ ಶಿವಪ್ಪನಾಯಕನ ಆಸ್ಥಾನದಲಿ ಇದ್ದವರು ನಮ್ಮ ಹಿರಿಯರು. ಹೋರಾಡಿದಾ ರಕ್ತ, ದೊಡ್ಡ ಜೀವಗಳ ತಿಂದವರು ಕತ್ತಿಯಲಿ ಹುಲಿಯಂತೆ ಬಾಳಿದ ಮಂದಿ ಅದುವೆ ನೆತ್ತರ ನಮ್ಮ ಗುಂಡನಾ ನಾಳದಲಿ ಹರಿಯುತಿಹುದು.

ವೆಂಕಟಕೃಷ್ಣ :—ಅದುವೆ ನೆತ್ತರ ಸಂಬಂಧ ಇರಲೆಂದೇ ಕಪಿನೀಪತಿಯವರು ಕುವರಿಯನು ಕರೆತಂದಿಹರು—

ನರಸಿಂಹ :—ಸುಸ್ವಾಗತವೀ ಸಲಹೆಗೆ– ನಮ್ಮ ಗುಂಡು ಕಡಲ ಪಯಣದ ಇಸಮು. ಇಂಗ್ಲೆಂಡಿಗೆ ತೆರಳಿ ಬ್ಯಾರಿಸ್ಟರಾಗುವ ಹುಚ್ಚು– ಅದಕೆ ತಗುಲುವ ವೆಚ್ಚ ಕಪಿನಿಪತಿ ಕೊಡುವವರೆ!

ಕಪಿನೀಪತಿ :—(ಬೆಚ್ಚಿ ಬಿದ್ದೆದ್ದು ನಿಂತು) ಬರುವೆವೈ ಮಹನೀಯರ ಹೆಣ್ಣಿನಾ ದುಡ್ಡಿನಲಿ ಓದಿ ದುಡಿದು ಹಾಕುವ ಅನ್ನ ಯಾವಗಂಡಿನ ದೇಹಕ್ಕೆ ಒಗ್ಗೀತು. ಆಗದಾ ಮಾತಿದು....ವೆಂಕಟಕೃಷ್ಣ ಮೊದಲಿಗೇ ಹೇಳಬಾರದಿತ್ತೆ ಈ ಸಂಗತಿಯ ಇವರ ಸಂಗಮಾಡಲು ವೆಂಗನಂತಿಲ್ಲಿಗೈತರಲಿದಲೆ ಇರಬಹುದಿತ್ತು. ಹೊರಡುವೆವು ನಾವಿನ್ನು ಹಣೆಯಲ್ಲಿ ಬರೆದಿಲ್ಲ ನಿಮ್ಮ ಸಂಬಂಧ ...

ನರಸಿಂಹ :—ಸಿಟ್ಟಾಗದಿರಿ ಜೀಯ. ಗುಂಡನಾ ಹಂಬಲಕೆ ನಿಮ್ಮ ಬಲ ವಿಲ್ಲದೊಡೆ ದೈವೇಚ್ಛೆ ಎಂದೆಂದು ಕೈಕೊಡವಬಹುದು ಅದಕೇಕೆ ಈ ಕೋಪ ಈ ಮಾತು ಈ ರೀತಿ ನೀತಿ. ...

ಕಪನಿಪತಿ :—ಹೊಟ್ಟೆಯುರಿಯುವ ನುಡಿಗೆ ಸಿಟ್ಟೇಕೆಂದು ಕೇಳಿದವರುಂಟೆ. ಋಣಾನು ಬಂಧಕೆ ಗಾಣಹಾಕಿ ಹಿಡಿದವರುಂಟೆ. ಗಂಟನಾಸೆಗೆ ಗಂಡು ಒಡ್ಡಿದ ಬಂಟ ನೆಂಟನಾಗುವುದುಂಟೆ – ಬಿಡಿ ಬಿಡಿ ಯಾತರಾ ಮಾತಿದು.

ವೆಂಕಟಕೃಷ್ಣ :—ಸುಮ್ಮನಿರಬಾರದೇ ಕಪಿನಿ ಏನು ಕೋಪದವನಯ್ಯ– ನರಸಿಂಹ ಈ ಎಲ್ಲ ಕನಕದ ವಿಷಯ ಬದಿಗಿಟ್ಟು ಮಾತಾಡು ಗುಂಡನಿಗೆ ಮದುವೆ ನಿನಗಲ್ಲ ವೆಂಬುದದು ನೆನಪಿರಲಿ.

ನರಸಿಂಹ :—ತೊಂಡೆ ಭಾವಿಯ ಹೆಣ್ಣು ತೊಂಡೆ ಹಣ್ಣಂತಿತ್ತು ಗುಂಡನೇ ಬೇಡೆಂದ ಗಂಡುಕಳೆ ಅದಕೆಂದು. ಹದಿನೈದು ಸಾವಿರವ ಎಣಿಸುವೆ ನೆಂದರು– ಸುಳ್ಳಾದೊಡೆ ಸೀನಪ್ಪನನು ಕೇಳಿ, ಆ ಮಾತು ಈಗೇಕೆ– ಸಾವಿರಕೆ ಹುಂ ಅನ್ನಿ ಇದರೊಳಗೆ ಚೌಕಸಿಯೆ?

ಕಪನೀಪತಿ :— ಹಿಂದೊಂದು ಮುಂದೊಂದು ಮಾತಿನವನಾನಲ್ಲ - ಅಪರಂಜಿ ಯಂತಿಹ ಹುಡುಗಿ ಕೈಲಾದ್ದು ಕೊಡುವವನು ಅಹುದಾದರಹುದೆನ್ನಿ ಇಲ್ಲವಾದೊಡಿಲ್ಲೆನ್ನಿ.

ನರಸಿಂಹ : ಅದು ಸರಿಯೆ - ನಾಂ ಕೂಡ ಖಂಡಿತವಾಗಿ - ನಿಮ್ಮ ಹುಡುಗಿಯ ರೂಪು ಒನಪು ವಯ್ಯಾರ ಮೆಚ್ಚಿಹನು ಎನಕುವರ, ವಿಶ್ವಾಸ ಮುಖ್ಯ ಅಲ್ಲವೆ! ಗಂಡ ಹೆಂಡಿರಾಗಿರುವವರು ಅವರು ನಮಗೇಕೆ 'ಸುಲಗ್ನಾ ಸಾವಧಾನ'ವ ಕಾಯುವವನಾನಿನ್ನು ಹುಡುಗಿಗೆ ಹಾಡು ಗೀಡು ಬರ್ಪುದೀಂ!

ಕಪಿನೀಪತಿ :— ಹುಡುಗನಿಗೆ ಏಂಬಹುದು? ಗುಂಡಣ್ಣಾ ನೀನೇನು ಓದಿರುವಿ?

ನರಸಿಂಹ :— ಅವನನೇನು ಕೇಳುವಿರಿ - ಹೇಳುವೆನು ಕೇಳಿ ಬಿಎಸ್ಸಿ ಓದುವವ ಅವನು ಮೆಟ್ರಿಕ್ಯೂ ಮುಗಿದಮೇಲೆ. ಹುಡುಗಿ ಹಾಡುವಳೆ?

ವೆಂಕಟಕೃಷ್ಣ :— ಕಸೂತಿ ಹಾಕುವಳು - ಮನೆಗೆಲಸ ಮಾಡುವಳು ಅತ್ತೆ ಮಾವಗೆ ಭೀತಿ - ಕೈಹಿಡಿದವಗೆ ಪ್ರೀತಿ - ಹೀಗಿರಬೇಕೆಂಬ ನೀತಿಬಲ್ಲವಳು ಕಾಮಾಕ್ಷಿ.

ಸುಂದರಿ :— ಅಷ್ಟಿದ್ದರಾಯ್ತಲ್ಲ – ಮುಹೂರ್ತ ಇಡಿಸಬಾರದೆ!

ನರಸಿಂಹ :— ಅಹುದಹುದು ಶುಭಸ್ಯ ಶೀಘ್ರಂ.

ಕಪನೀಪತಿ :— ನನ್ನ ಯೋಗ್ಯತೆ ಒಂದು ದಿನದಾ ಮದುವೆ – ಅದಿಲ್ಲ ಇದಿಲ್ಲವೆಂಬ ಕೊಂಗುಮಾತಾಡಿದರೆ ಎದ್ದೋಡಿ ಹೊರಡುವ ಕಡುಕೋಪಿ ನಾನು ಸಮ್ಮತವೆ?

ನರಸಿಂಹ : ದೈವೇಚ್ಛೆ - ಅನುಕೂಲಸಿಂಧು.

ಭಾಗ್ಯಮ್ಮ :— ಹೊರಡುವೆವು ಇನ್ನು – ಕಾಮಾಕ್ಷೀ ಮಂಡಿಯೂರಿ ನಮಿಸು ಅತ್ತೆ ಮಾವಗೆ ಮಗಳೆ – ಅವರ ಆಶೀರ್ವಾದ ಕಾಯಲಿನ್ನು.

[ಕೈ ಕುಲುಕಿ–ಕಡ್ಡಿ ಮುರಿದಂತೆ ನಿಷ್ಕರ್ಷೆಯಾದ ಸಂಭ್ರಮದಿ ಹಿಗ್ಗಿ ನಡೆದರು ಭಾವಿಬೀಗರು ಬಿಗುಮಾನದಿಂದ]

ನರಸಿಂಹ :— ಒಂದು ಮಾತೂ ಆಡಿದ್ದು ಕೇಳಲಿಲ್ಲವೆ ಆ ಹುಡುಗಿ.

ಸುಂದರಿ :— ಕೇಳಿವಂತೆ.... ಮೂಕಿಗೀಕಿಯೊ? ಗುಂಡನ ಪುಣ್ಯ.

(— ತೆರೆ —)

— ೬ —

[ಗುಂಡ – ಕಾಮಾಕ್ಷಿಯುರು, ಲಗ್ನಮಂಟಪದಿಂದ ಕೈಯ್ಯಲ್ಲಿ ಕೈಹಿಡಿದು, ಅಗ್ನಿದೇವನ ಸುತ್ತಿ, ಗಂಡ ಹೆಂಡಂದಿರಾಗಿ ದೇವರಮನೆಗೆ ತೆರಳಿ, ದೇವಂಗೆ ನಮಿಸಿ ಹೊರಬಿದ್ದಾಗ ಅಡ್ಡಗಟ್ಟಿದ್ದರು ಬಾಗಿಲಬಳಿ ಗಂಡು ಹೆಣ್ಣಿನ ಕಡೆಯ ಹುಡುಗ ಹುಡುಗಿಯರು, ಹೆಂಡತಿ ಗಂಡರಿಂದ ಹೆಸರ ಹೇಳಿಸಲು. ಇಡಿಯ ಲಗ್ನದ ಮನೆಯೆ ಅಚ್ಚರಿಯ ಪಟ್ಟಿತ್ತು ಗಂಡ ಹೆಂಡಿರಿವರು ಮೂಗರೇ ಇರಬಹುದೆಂದು. ಇಬ್ಬರೂ ಬಾಯಿ ಬಿಟ್ಟಿರಲಿಲ್ಲ.]

ಸುಂದರಿ:—ಗಂಡನಾ ಹೆಸರ್ಹೇಳಿ ಬಾಗಿಲು ದಾಟಿದರೆ ಚೆನ್ನ.

ಭಾಗ್ಯಮ್ಮ:—ಹೆಂಡತಿಯು ಹೆಸರ್ಹೇಳಿ ಹೊಸಲು ದಾಟಿ ಅಳಿಯು ದೇವರೆ.

ಸುಂದರಿ:—ಮೊದಲು ನೀ ಹೇಳು ಕಾಮು....

ಭಾಗ್ಯಮ್ಮ:—ಮೊದಲು ನೀವೇ ಹೇಳಿ – ಕಾಮುವಿನ ಕೈಹಿಡಿದ ಕೆಳದಿಯಾ ವೀರರೇ

[ನಸುನಾಚಿಕೆಯ ಮುದ್ದೆಯಂತಿಬ್ಬರೂ ಸುಲುಗಿದರು]

ಗಂಡಿನ ಕಡೆಯ ಹುಡುಗಿಯರು:—ನೀನೇ ಹೇಳು ಕಾಮು ಗಂಡನ ಹೆಸರು.

ಹೆಣ್ಣಿನ ಕಡೆಯವರು:—ಬೇಡ ಮೊದಲು ಗಂಡೇ ಬಾಯಿ ಬಿಡಬೇಕು.

ಸುಂದರಿ:—ಹೇಳಬಾರದೆ ಕಾಮೂ ...

ಭಾಗ್ಯಮ್ಮ:—ಬಾಯಿಬಿಡಿ ಗುಂಡಯ್ಯಾ....

[ಪೀಡನೆಯು ಪಿರಿದಾಗ ಕಡೆಗೊಮ್ಮೆ ಬಾಯಿಬಿಟ್ಟನು ಗುಂಡ ಭಂಡನಂತೆ]

ಗುಂಡ:—(ಹೊರಡಲಾರದ ಹೆಸರ ತಿಣು ತಿಣುಕಿ ಹೊರಹೊಮ್ಮಿಸುವ ಸಾಹಸದಿ ಬಾಯಿ ತೆರೆದು) ಕೊಕ್–ಕಾ–ಕ–ಕಾಕಾ–ಕಕ್ ಗಕ್–ಕ್ಕಾ ೦ ಮಾ ಕ್ಷೀ ೀ....

(ಭಡವ ಇವ ಬಿಕ್ಕಲನೆಂದು ಹೆಣ್ಣಿನವರೆಲ್ಲ ನಕ್ಕರು).

ಸುಂದರಿ:—ಈಗ ನೀ ಹೇಳಮ್ಮ ಕೋಕಿಲವಾಣಿ ಕಾಮಾಕ್ಷೀ....

ಕಾಮಾಕ್ಷಿ:—(ಅದುವೆ ಪ್ರಯಾಸದ ವೇದನೆಯಿಂ) ಗು ಗ್–ಗು ಗ್–ಗು ಗು ಗ್ಗೂ೦ಡು ಅಯ್ಯ್ರ....

(ಎಂದಾಗ ಗಂಡಿನವರೆಲ್ಲ ಗಹಗಹಿಸಿದರು. ಗಂಡ ಹೆಂಡಿರು ತಮತಮಗೆ ಸಮ ಜೋಡಿ ಎಂದು ಕಣ್ಣಲ್ಲಿ ಕಣ್ ಸೇರಿಸಿ ನೋಡಿಕೊಂಡರು ಆಗ)

ನರಸಿಂಹ:—ಅಯ್ಯೋ ಬಿಕ್ಕಲು ಹೆಣ್ಣೇ ಮೋಸವಾಯ್ತು.

ಕಪನೀಪತಿ:—ಕಾಮಾಕ್ಷಿ ಬಿಕ್ಕಲಾದೊಡಂ – ಸೊಕ್ಕಿಲ್ಲದಾ ಹೆಣ್ಣು ಸುಂದರಾಂಗಿ. ಗುಂಡಯ್ಯ ಬಿಕ್ಕಲೇ ಅಲ್ಲದೆಲೆ ತಿಕ್ಕಲೂ ಹೌದೆಂದು ತಿಳಿಯಬಹುದೆ!!! ..

(ಮದುವೆ ಮನೆಯೇ ನಗುವಲ್ಲಿ ಮುಳುಗುವುದು)

— ತೆರೆ —

—: ಮ ಂ ಗ ಳ ಂ :—

— ದಾಶರಥಿ ದೀಕ್ಷಿತ್.

ಅತ್ತೆ—ಅಳಿಯ

ಅತ್ತೆ ಆಕೆ – ಅಳಿಯ ನಾನು
ತೋರು ಕಣ್ಣಿಗೆ ಚಂದದಿಂದ
ಒಂದೇ ಮನೆಯಲಿ ಇರುತಿದ್ದೇವೆ
ಇದ್ದರು ಇದ್ದಾ೦ಗಲ್ಲ

ಯಾಕ! ಏನು ಏತಕ್ಕೆಂತ
ನಾಕು ಮಾತು ಕೂಡಾ ಆಕೆ
ಒಮ್ಮೆಯಾದರೂ ನನ್ನ ಎಂದೂ
ಕೇಳಲಿಲ್ಲಾ ಉತ್ತರ ಹೇಳಲಿಲ್ಲಾ

ಹಾಕಿದ್ದುಂಡು ಕೊಟ್ಟದ್ದುಟ್ಟು
ಹೇಳಿದ್ದಾ೦ಗ ಕೇಳಿಕೊಂಡು
ಬಾಳ ನಾನು ನಡೆಸುವುದಾದರೂ
ಆಕೆಗೆ ಸುಖವಿಲ್ಲಾ ಕಾರಣ ಶಿವನೇ ಬಲ್ಲ

ಸೀರೆ ಕೊಂಡರೆ ಎರಡನು ತರುವೆ
ಸಂಜೆಗಿಂತ ಮುಂಚೆಯೆ ಬರುವೆ
ಪಂಚೆಗಳನ್ನು ನಾನೇ ಒಗೆಯುವೆ
ಆದರು ನಗುವಿಲ್ಲ ಕಾರಣ ಶಿವನೇ ಬಲ್ಲ.

ನಾಟಕ ಸಿನಿಮಾಕ್ಹೋದರು ಕೂಡ
ಆಕೆಯ ಜತೆಯಲಿ ಮಗಳೂ ಬರುವಳು
ಆಕೆಯು ನಕ್ಕರೆ ನಾವೂ ನಗುವೆವು
ಆದರು ಹಿತವಿಲ್ಲ ಕಾರಣ ಶಿವನೇ ಬಲ್ಲ.

ಮಗಳೂ ಕೂಡ ಆಕೆಯ ತೆರದಲಿ
ಅಳಿಯನ ಮನೆಯಲಿ ಘುಮುಗುಡಲೆಂದು
ಆಕೆಯ ಮನದಲಿ ಇದೆಯೋ ಏನೋ
ದೇವರೆ ಬಲ್ಲ ನಾನೂ ಸಾವಿಗೆ ಹೆದರುಲ್ಲ.

—o—

REG. No. M. 4718 KORAVANJI, SEPTEMBER 1955

Printed by B S. Iyengar, Printer, Bangalore City.

Publisher—B. N. Gupta. Editor—M. Sivaram.